JAI KARNATAKA, JAI HIND.

ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಕನ್ನಡದ ಭಾಷಾಂತರ.

ಮಾನ್ಯ ರಾಜ್ಯಪಾಲರು:-

ಸನ್ಮಾನ್ಯ ಸಭಾಪತಿಗಳೇ, ಸನ್ಮಾನ್ಯ ಅಧ್ಯಕ್ಷರೇ ಹಾಗೂ ಸನ್ಮಾನ್ಯ ಸದಸ್ಯರೇ,

1997ರ ರಾಜ್ಯ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ನಿಮ್ಮನ್ನು ಹೃತ್ಪೂರ್ವಕವಾಗಿ ಸ್ವಾಗತಿಸಲು ಹಾಗೂ ನಿಮ್ಮನ್ನುದ್ದೇಶಿಸಿ ಮಾತನಾಡಲು ನನಗೆ ಸಂತೋಷವಾಗುತ್ತಿದೆ. ಈ ಸಂದರ್ಭದಲ್ಲಿ, ನಾನು ಸನ್ಮಾನ್ಯ ಸದಸ್ಯರಿಗೆ ಹಾಗೂ ಅವರ ಕುಟುಂಬವರ್ಗದವರಿಗೆ ಹೊಸ ವರುಷದ ಶುಭಾಶಯಗಳನ್ನು ಕೋರುತ್ತೇನೆ.

2. ಕಳೆದ ವರ್ಷ ಈ ಗೌರವಾನ್ವಿತ ಸಭೆಯನ್ನು ಉದ್ದೇಶಿಸಿ ಮಾತನಾಡಿದ ನಂತರ ಉಂಟಾದಂಥ ಕೆಲವು ಬೆಳವಣಿಗೆಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಬಯಸುತ್ತೇನೆ. ಈ ರಾಜ್ಯದ ಹಿರಿಯ ರಾಜಕೀಯ ನಾಯಕರಾದ ಶ್ರೀ ಹೆಚ್.ಡಿ.ದೇವೇಗೌಡ ಅವರು ಭಾರತದ ಪ್ರಧಾನ ಮಂತ್ರಿಯವರಾಗಿ ಆಯ್ಕೆಯಾಗಿರುವುದು ಹಾಗೂ ಕೇಂದ್ರದಲ್ಲಿ ಸಂಯುಕ್ತ ರಂಗ ಸರ್ಕಾರದ ನಾಯಕತ್ವವನ್ನು ವಹಿಸಿರುವುದು ಕರ್ನಾಟಕದವರಾದ ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳನ್ನು ಆಧರಿಸಿ, ಕೇಂದ್ರದಲ್ಲಿ ಹೊಸ ಸರ್ಕಾರ ರಚನೆಯಾದ ಮೇಲೆ ಸಮುದಾಯ ಆರೋಗ್ಯ ಸೇವೆಗಳು, ಪ್ರಾಥಮಿಕ ಶಿಕ್ಷಣ, ಗ್ರಾಮೀಣ ರಸ್ತೆಗಳು, ನಮ್ಮ ಬಹುಸಂಖ್ಯಾತ ಜನರ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಜನರಿಗಾಗಿ ಗೃಹ ನಿರ್ಮಾಣ ಹಾಗೂ ಪ್ರಮುಖ ಸಾಮಾಜಿಕ ಸೇವೆಗಳಿಗೆ ಇನ್ನೂ ಹೆಚ್ಚು ಹಾಗೂ ತೀವ್ರ ಗಮನವನ್ನು ಕೊಡಲಾಗುತ್ತಿದೆ.

3. ಇವುಗಳಿಗೆ ನೀಡಿದ ಪ್ರಾಮುಖ್ಯತೆಗೆ ನನ್ನ ಸರ್ಕಾರದ ಸಂಪೂರ್ಣ ಸಹಮತಿ ಇದೆ ಮತ್ತು ಈ ಕ್ಷೇತ್ರಗಳಿಗೆ ಸಾಕಷ್ಟು ಹಣಕಾಸು ಒದಗಿಸುತ್ತಿದೆ. ಕೇಂದ್ರ ಸರ್ಕಾರವು, ಸಾಮಾಜಿಕ-ಆರ್ಥಿಕ ಅಭಿವೃದ್ಧಿಗಾಗಿ ಹೆಚ್ಚು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಕ್ಕೆ ತರುವ ಸಲುವಾಗಿ ಈಗ ಇನ್ನಷ್ಟು ವಿಕೇಂದ್ರೀಕರಿಸುವ ಮತ್ತು ರಾಜ್ಯಗಳಿಗೆ ಸಂಪನ್ಮೂಲಗಳನ್ನು ಒದಗಿಸುವ ಅವಶ್ಯಕತೆಯ ಬಗ್ಗೆ ಹೆಚ್ಚು ಮನಗಂಡಿದೆ. ಈ ಹಿನ್ನಲೆಯಲ್ಲಿ ಅನೇಕ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಹಾಗೂ ಕೇಂದ್ರ ವಲಯ ಯೋಜನೆಗಳನ್ನು ರಾಜ್ಯಗಳಿಗೆ ವರ್ಗಾಯಿಸಿ ಕೊಡುತ್ತಿರುವುದು ಸಂತೋಷಕರ ವಿಷಯವಾಗಿದೆ.

4. ಜಾಗತೀಕರಣ, ಸ್ಪರ್ಧೆ ಮತ್ತು ಅತ್ಯವಶ್ಯಕವಲ್ಲದ ವಲಯಗಳಲ್ಲಿ ಸರ್ಕಾರದ ಪಾಲ್ಗೊಳ್ಳುವಿಕೆಯನ್ನು ಹಿಂತೆಗೆದುಕೊಳ್ಳುವುದು-ಒಳಗೊಂಡಂತೆ ಅಂತರ್ ರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟಗಳಲ್ಲಿ ನಡೆಯುವ ಬೆಳವಣಿಗೆಗಳ ಬಗ್ಗೆ ನನ್ನ ಸರ್ಕಾರಕ್ಕೆ ಅರಿವಿದೆ. ಸಾಮಾಜಿಕ ನ್ಯಾಯ ಹಾಗೂ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ದುರ್ಬಲ ವರ್ಗದವರ ಕ್ಷೇಮಾಭಿವೃದ್ಧಿಯ ತನ್ನ ಎರಡು ತತ್ವಗಳನ್ನು ಬಲಿಗೊಡದೇ, ಇಂಥ ನೀತಿ ಸುಧಾರಣೆಗಳನ್ನು ಯಾವ ಯಾವ

ವಲಯಗಳಲ್ಲಿ ಜಾರಿಗೆ ತರಬಹುದು ಎಂಬುದನ್ನು ನಾವು ಪರಿಶೀಲಿಸುತ್ತಿದ್ದೇವೆ. ಸರಕುಗಳನ್ನು ಮತ್ತು ಸೇವೆಗಳನ್ನು ಅವುಗಳ ಆರ್ಥಿಕ ವೆಚ್ಚದಲ್ಲಿ ಒದಗಿಸುವ ಅಗತ್ಯತೆಯನ್ನು ನಾವು ಮನಗಂಡಿದ್ದೇವೆ. ಈ ಸೇವೆಗಳು ಸಮಾಜದ ದುರ್ಬಲ ವರ್ಗಗಳಿಗೆ ಹೊರೆಯಾಗದ ರೀತಿಯಲ್ಲಿ ನೆಲೆಗೊಳ್ಳುವಂತೆ ಮಾಡುವ ಒಂದು ನೀತಿ ಸುಧಾರಣೆಯನ್ನು ಜಾರಿಗೆ ತರಲು ನಾವು ಉದ್ದೇಶಿಸಿದ್ದೇವೆ.

5. ಈ ವರ್ಷ ಭಾರತೀಯರಿಗೆಲ್ಲ, ಅವರು ಎಲ್ಲಿಯೇ ಇದ್ದರೂ, ವಿಶೇಷ ಮಹತ್ವದ ವರ್ಷವಾಗಿದೆ ಎಂಬುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. 50 ವರ್ಷಗಳ ಹಿಂದೆ ಭಾರತವು ವಿದೇಶಿಯರ ಆಳ್ವಿಕೆಯಿಂದ ಮುಕ್ತವಾಗಿ ಸ್ವಾತಂತ್ರ್ಯ ಪಡೆಯಿತು. ಆಗಿನಿಂದ ನಮ್ಮ ರಾಷ್ಟ್ರವು ಅನೇಕ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ. ಜಾಗೃತ, ಪ್ರಗತಿಪರ ಮತ್ತು ಬಲಿಷ್ಠ ಭಾರತವನ್ನು ಕಟ್ಟಬೇಕೆಂದು ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೆ ಹಾಗೂ ಸಂವಿಧಾನ ಶಿಲ್ಪಿಗಳಿಗೆ ಪ್ರೇರಣೆ ನೀಡಿದ ವಿಚಾರಧಾರೆಗಳನ್ನು ಮತ್ತೆ ಪುನಶ್ಚೇತನಗೊಳಿಸಬೇಕಾಗಿದೆ ಮತ್ತು ರಾಷ್ಟ್ರ ನಿರ್ಮಾಣಕ್ಕಾಗಿ ಅತ್ಯುತ್ಸಾಹದಿಂದ ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಮತ್ತೊಮ್ಮೆ ಧಾರೆ ಎರೆಯಬೇಕಾಗಿದೆ. ನನ್ನ ಸರ್ಕಾರವು, ಈ ಮಹತ್ವದ ಸಂದರ್ಭವನ್ನು ಆಚರಿಸುವುದಕ್ಕಾಗಿ ಯೋಜನೆಗಳನ್ನು ರೂಪಿಸುತ್ತಿದೆ. ನಮ್ಮ ಸಾಧನೆಗಳನ್ನು ತಿಳಿಯಪಡಿಸುವುದೇ ಅಲ್ಲದೆ, ಉದಾರವಾದ, ಸಹಿಷ್ಣುತೆಯಿಂದ ಕೂಡಿದ ಮತ್ತು ಸರ್ವ ಸಮತೆಯ ಸಮಾಜದ ನಿರ್ಮಾಣಕ್ಕಾಗಿ, ಇನ್ನೂ ಇರುವಂಥ, ಕೆಲವು ಅಡ್ಡಿ ಆತಂಕಗಳ ಬಗ್ಗೆ ನಮ್ಮ ಜನತೆಗೆ ತಿಳುವಳಿಕೆ ನೀಡಬೇಕಾಗಿದೆ. ಜಾತೀಯತೆ, ಮತೀಯ ಮೂಲಭೂತವಾದ ಹಾಗೂ ಭ್ರಷ್ಟಾಚಾರ ಮುಂತಾದಂಥ ಸಾಮಾಜಿಕ ಪಿಡುಗುಗಳ ವಿರುದ್ಧ ನಿರಂತರ ಹೋರಾಟ ನಡೆಸಬೇಕಾಗಿದೆ. ಜಾತ್ಯತೀತತೆ, ಕೋಮು ಸೌಹಾರ್ದ, ಸಾಮಾಜಿಕ ನ್ಯಾಯ ಮತ್ತು ಕೇಂದ್ರ-ರಾಜ್ಯಗಳ ನಡುವೆ ಸೌಹಾರ್ದಯುತ ಸಂಬಂಧ ಇವುಗಳಿಗೆ ಒತ್ತು ನೀಡಬೇಕಾಗಿದೆ. ನಮ್ಮ 50ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿರುವ ಈ ವರ್ಷ ಭಾರತದ ಜನತೆಯನ್ನು ಅಭಿನಂದಿಸುವಲ್ಲಿ ಮತ್ತು ಈ ಆಚರಣೆಯ ಅಂಗವಾಗಿ ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುವಲ್ಲಿ ಮಾನ್ಯ ಸದಸ್ಯರು ನಮ್ಮ ಜೊತೆಗೂಡಿ ಕಾರ್ಯ ನಿರ್ವಹಿಸುತ್ತಾರೆಂಬುದರಲ್ಲಿ ಯಾವುದೇ ಸಂಶಯವಿಲ್ಲ. 1997-98, ನಮ್ಮನ್ನು ಮುಂದಿನ ಶತಮಾನಕ್ಕೆ ಕೊಂಡೊಯ್ಯುವ 9ನೇ ಪಂಚವಾರ್ಷಿಕ ಯೋಜನೆಯ ಪ್ರಾರಂಭದ ವರ್ಷವಾಗಿದೆ. ಆಗ ನಾವು ಒಂದು ಸಶಕ್ತ, ಅಖಂಡ ಹಾಗೂ ಸದಭಿಮಾನದ ರಾಷ್ಟ್ರವಾಗಿ ಮುನ್ನುಗ್ಗಬೇಕಾಗಿದೆ. ಒಟ್ಟಾರೆ ಶೇ. 7 ರಷ್ಟು ವಾರ್ಷಿಕ ಆರ್ಥಿಕ ಬೆಳವಣಿಗೆ ಪ್ರಮಾಣದ ಗುರಿಯನ್ನು ಇಟ್ಟುಕೊಂಡಿರುವ ಒಂಬತ್ತನೇ ಪಂಚವಾರ್ಷಿಕ ಯೋಜನೆಯ ಸಾಮಾನ್ಯ ದೃಷ್ಟಿಕೋನವನ್ನು ನನ್ನ ಸರ್ಕಾರವು ಸಮರ್ಥಿಸುತ್ತದೆ. ಈ ಬೆಳವಣಿಗೆಯ ಪ್ರಮಾಣವನ್ನು ಸಾಧಿಸಲು ರಾಜ್ಯವು ಸೂಕ್ತ ಯೋಜನೆ ಮತ್ತು ಕಾರ್ಯತಂತ್ರವನ್ನು ರೂಪಿಸಲಿದೆ.

6. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾಗಿದೆ ಎಂಬುದು ಸಮಾಧಾನದ ಸಂಗತಿಯಾಗಿದೆ. ರಾಜ್ಯದಲ್ಲಿ ಲೋಕಸಭೆಗೆ ಮತ್ತು

ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ಶಾಂತಿಯುತವಾಗಿ ನಡೆಸುವುದಕ್ಕಾಗಿ ಸಾಕಷ್ಟು ವ್ಯವಸ್ಥೆಗಳನ್ನು ಮಾಡಲಾಗಿತ್ತು. ರಾಜ್ಯವು, ವಿವಿಧ ಧರ್ಮ ಹಾಗೂ ಭಾಷೆಗಳ ಜನರು ಸೌಹಾರ್ದದಿಂದ ಬಾಳುತ್ತಿರುವ ಒಂದು ಶಾಂತಿಯುತ ರಾಜ್ಯವೆಂಬ ಹೆಗ್ಗಳಿಕೆಗೆ ಈಗಲೂ ಪಾತ್ರವಾಗಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಉಲ್ಲಂಘಿಸಿದ ಕೆಲವು ಘಟನೆಗಳನ್ನು ದೃಢವಾದ ಮತ್ತು ಸೂಕ್ತವಾದ ಮಧ್ಯಪ್ರವೇಶದ ಮೂಲಕ ನಿವಾರಿಸಲಾಯಿತು ಮತ್ತು ಪರಿಸ್ಥಿತಿಯನ್ನು ಶೀಘ್ರವಾಗಿ ನಿಯಂತ್ರಣಕ್ಕೆ ತರಲಾಯಿತು.

7. ಪೊಲೀಸ್ ಪಡೆಯನ್ನು ಮತ್ತು ಅಗ್ನಿಶಾಮಕ ದಳವನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಅವುಗಳ ಆಧುನೀಕರಣ ಕುರಿತ ಪ್ರಸಕ್ತ ಕಾರ್ಯಕ್ರಮಗಳನ್ನು ನಾವು ಮುಂದುವರಿಸುತ್ತೇವೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ನೋಡಿಕೊಳ್ಳುತ್ತಿರುವ ಆಡಳಿತ ಯಂತ್ರಕ್ಕೆ ಇನ್ನೂ ಹೆಚ್ಚು ತಾಂತ್ರಿಕ ಸಾಧನ ಸಾಮಗ್ರಿಗಳನ್ನು ಒದಗಿಸುವುದಕ್ಕೆ ಹೆಚ್ಚು ಒತ್ತು ಕೊಡಲಾಗುವುದು.

8. ಕಳೆದ ವರ್ಷ ಮಳೆಗಾಲ ಸ್ವಲ್ಪ ತಡವಾಗಿ ಆರಂಭವಾಯಿತು. ಕೆಲವು ಪ್ರದೇಶಗಳಲ್ಲಿ ಬರಗಾಲವಿದ್ದರೆ ಹಲವು ಜಿಲ್ಲೆಗಳಲ್ಲಿ ಅತ್ಯಂತ ಅಲ್ಪಾವಧಿಯಲ್ಲಿ ಆದ ಭಾರಿ ಮಳೆ ಜೀವ ಮತ್ತು ಆಸ್ತಿಪಾಸ್ತಿಗೆ ಹಾನಿಯನ್ನುಂಟುಮಾಡಿತು. ಹಿಂಗಾರು ಮಳೆ ಆರಂಭಗೊಂಡಾಗಲೂ ಸಾರ್ವಜನಿಕ ಮತ್ತು ಖಾಸಗಿ ಆಸ್ತಿಪಾಸ್ತಿಗೆ ಹಾನಿಯುಂಟುಮಾಡಿತು. ನಷ್ಟಕ್ಕೆ ಗುರಿಯಾದ ಖಾಸಗಿ ಸ್ವತ್ತಿನ ಅಂದಾಜು ಮೌಲ್ಯ 50 ಕೋಟಿ ರೂ.ಗಳಾದರೆ ಸಾರ್ವಜನಿಕ ಸ್ವತ್ತಿನ ಮೌಲ್ಯ 84 ಕೋಟಿ ರೂ.ಗಳು 1996ರ ನವೆಂಬರ್ ಕೊನೆಯವರೆಗೆ ರಾಜ್ಯ ಸರ್ಕಾರವು ನೈಸರ್ಗಿಕ ವಿಕೋಪ ಪರಿಹಾರ ನಿಧಿಯಿಂದ 30.5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. 134.41 ಕೋಟಿ ರೂ.ಗಳ ಕೇಂದ್ರ ನೆರವನ್ನು ಕೋರಿ 1996ರ ಡಿಸೆಂಬರ್‌ನಲ್ಲಿ ಭಾರತ ಸರ್ಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಲಾಯಿತು.

9. ಜಲವಿದ್ಯುತ್ ಕೇಂದ್ರಗಳ ಜಲಾಶಯಗಳಿಗೆ ಸಂಬಂಧಪಟ್ಟ ಜಲಾನಯನ ಪ್ರದೇಶಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಳೆ ಆಗದಿದ್ದ ಕಾರಣ ಆ ಮೂಲಗಳಿಂದ ವಿದ್ಯುತ್ ಉತ್ಪಾದನೆ ಕಡಿಮೆಯಾಯಿತು.

10. ನನ್ನ ಸರ್ಕಾರ ವಿದ್ಯುತ್, ಸಂಪರ್ಕ ಹಾಗೂ ನೀರಾವರಿಯಂಥ ಮೂಲಭೂತ ಸೌಕರ್ಯದ ವಲಯಗಳ ಮೇಲೆ ತನ್ನೆಲ್ಲ ಸಾಮರ್ಥ್ಯ ಹಾಗೂ ಸಂಪನ್ಮೂಲಗಳನ್ನು ಕೇಂದ್ರೀಕರಿಸಲು ಪ್ರಯತ್ನಿಸುತ್ತಿರುವ ವಿಷಯ ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಗ್ರಾಮೀಣ ಅಭಿವೃದ್ಧಿ ಹಾಗೂ ಕೃಷಿ ಕ್ಷೇತ್ರಗಳಿಗೆ ನಾವು ನೀಡುತ್ತಿರುವ ಆದ್ಯತೆ ಎಂದಿನಂತೆಯೇ ಮುಂದುವರಿಯುತ್ತದೆ. ಜೊತೆ-ಜೊತೆಯಲ್ಲಿಯೇ, ನನ್ನ ಸರ್ಕಾರವು ಮಾನವ ಸಂಪನ್ಮೂಲಗಳ ಅಭಿವೃದ್ಧಿ ಮೇಲೆ ನೇರ ಪರಿಣಾಮ ಬೀರುವಂತಹ ಯೋಜನೆಗಳನ್ನು ಮತ್ತಷ್ಟು ಬಲಪಡಿಸಲು ಇಚ್ಛಿಸುತ್ತದೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ಶಿಕ್ಷಣ, ಆರೋಗ್ಯ ಮತ್ತು ವಸತಿಗಳಂಥ ಕೆಲವು ಮೂಲಭೂತ ಸಾಮಾಜಿಕ ಸೌಲಭ್ಯಗಳು ಸುಲಭವಾಗಿ ದೊರೆಯುವಂತೆ ನಾವು ಸುಧಾರಣೆ ಮಾಡಬೇಕಾಗಿದೆ. ನನ್ನ ಸರ್ಕಾರ ಮಹಿಳೆಯರಿಗೆ ಅಧಿಕಾರ ನೀಡುವ ವಿಷಯದಲ್ಲಿ ಮತ್ತು ಯುವ

ಜನರ ಅಭಿವೃದ್ಧಿಯಲ್ಲಿ ಸಹ ದೃಢ ನಂಬಿಕೆ ತಳೆದಿದೆ. ಉದ್ಯೋಗ ರಹಿತರಿಗೆ, ಅದರಲ್ಲಿಯೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿನ ಉದ್ಯೋಗರಹಿತರಿಗೆ ಉದ್ಯೋಗವನ್ನು ಸೃಜಿಸುವುದಕ್ಕೆ ನನ್ನ ಸರ್ಕಾರವು ವಿಶೇಷ ಗಮನ ಹರಿಸಿದೆ. ಅಲ್ಲದೆ, ನನ್ನ ಸರ್ಕಾರವು ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪಕ ಅಭಿವೃದ್ಧಿಗಾಗಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಮತ್ತು ನಗರ ಸ್ಥಳೀಯ ಸಂಸ್ಥೆಗಳನ್ನು ನಿಜವಾಗಿಯು ಪ್ರಜಾಸತ್ತಾತ್ಮಕ ಸ್ಪಂದನ ಶೀಲ ಮತ್ತು ಪರಿಣಾಮಕಾರಿ ಸಂಸ್ಥೆಗಳನ್ನಾಗಿಸುವ ನನ್ನ ಪ್ರಯತ್ನಗಳನ್ನು ಮುಂದುವರೆಸಬಯಸುತ್ತದೆ. ನನ್ನ ಭಾಷಣದಲ್ಲಿ ಈ ಮಹತ್ವದ ಕ್ಷೇತ್ರಗಳಿಗೆ ನೇರವಾಗಿ ಸಂಬಂಧಿಸಿದ ನನ್ನ ಸರ್ಕಾರದ ನೀತಿಗಳು ಮತ್ತು ಕಾರ್ಯಕ್ರಮಗಳ ಮೇಲೆ ನಾನು ಗಮನವನ್ನು ಕೇಂದ್ರಿಕರಿಸಬಯಸುತ್ತೇನೆ.

11. ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ನನ್ನ ಸರ್ಕಾರವು ಅನೇಕ ಕ್ರಮಗಳನ್ನು ಕೈಗೊಳ್ಳುತ್ತಿದೆ. 6311 ಮೆ.ವ್ಯಾ. ಸಾಮರ್ಥ್ಯದ ವಿದ್ಯುಚ್ಛಕ್ತಿ ಉತ್ಪಾದನೆಗೆ ಸಂಬಂಧಿಸಿದಂತೆ ಒಪ್ಪಂದ ಪತ್ರಗಳಿಗೆ ಸಹಿ ಹಾಕುವ ಮೂಲಕ ಅನೇಕ ವಿದ್ಯುಚ್ಛಕ್ತಿ ಯೋಜನೆಗಳ ಬಗ್ಗೆ ಪ್ರಾರಂಭಿಕ ಕ್ರಮ ಕೈಗೊಂಡಿದ್ದೇವೆ. ಈ ಯೋಜನೆಗಳ ಫಲ ದೊರೆಯಬೇಕಾದರೆ ಸ್ವಲ್ಪ ಸಮಯ ಬೇಕಾಗುವುದರಿಂದ ಸಾಧ್ಯವಾದಷ್ಟು ಕಡಿಮೆ ಕಾಲಾವಧಿಯಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ, ಸರ್ಕಾರವು ಸ್ಪರ್ಧಾತ್ಮಕ ಹರಾಜು ವ್ಯವಸ್ಥೆಯ ಮೂಲಕ, ರಾಜ್ಯದ ವಿವಿಧ ಸ್ಥಳಗಳಲ್ಲಿ ಒಟ್ಟು 650 ಮೆ.ವ್ಯಾ. ಸಾಮರ್ಥ್ಯದ 15 ಸಣ್ಣ ಬಹು ಇಂಧನ ವಿದ್ಯುಚ್ಛಕ್ತಿ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಸುಮಾರು 2 ವರ್ಷಗಳಲ್ಲಿ ಈ ಬಹು ಇಂಧನ ಯೋಜನೆಗಳಿಂದ ವಿದ್ಯುಚ್ಛಕ್ತಿ ಉತ್ಪಾದನೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ ಅಲ್ಲದೆ, ಒಂದು ವರ್ಷದೊಳಗೆ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವ ಸಾಮರ್ಥ್ಯವಿರುವ ನಾಲ್ಕು ಬಾರ್ಜ್‌ಗಳ ಮೇಲಿನ ವಿದ್ಯುತ್ ಕೇಂದ್ರಗಳನ್ನು ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿ ಸ್ಥಾಪಿಸಲು ಅನುಮತಿ ನೀಡಲಾಗಿದೆ. ವಿದ್ಯುಚ್ಛಕ್ತಿ ಖರೀದಿ ಒಪ್ಪಂದದ ಬಗ್ಗೆ ಪ್ರವರ್ತಕರೊಂದಿಗೆ (ಡೆವಲಪರ್ಸ್) ಮಾತುಕತೆಗಳನ್ನು ಪೂರ್ಣಗೊಳಿಸಲಾಗಿದೆ.

12. ಕರ್ನಾಟಕ ವಿದ್ಯುತ್ ನಿಗಮವು (ಕೆಪಿಸಿಎಲ್) ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ 1545 ಕೋಟಿ ರೂಪಾಯಿಗಳ ವೆಚ್ಚದಲ್ಲಿ 420 ಮೆಗಾವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ 5 ಮತ್ತು 6ನೇ ಘಟಕಗಳನ್ನು ಸ್ಥಾಪಿಸಲು ಕ್ರಮ ಕೈಗೊಂಡಿರುವುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಕರ್ನಾಟಕ ವಿದ್ಯುತ್ ನಿಗಮವು 1996ರ ಸೆಪ್ಟಂಬರ್‌ನಲ್ಲಿ ಈ ಯೋಜನೆಗೆ ಬೇಕಾದ ಪೂರ್ತಿ ಹಣದ ವ್ಯವಸ್ಥೆ ಮಾಡಿಕೊಂಡಿದ್ದು, ನಿವೇಶನದಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಈ ಘಟಕಗಳು 1999ರಲ್ಲಿ ಪೂರ್ಣಗೊಳ್ಳಲಿವೆ. 50 ಮೆಗಾವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಕದ್ರ ಜಲ ವಿದ್ಯುತ್ ಯೋಜನೆಯ ಮೊದಲ ಘಟಕವು 1997ರ ಮಾರ್ಚ್‌ನಲ್ಲಿ ಕಾರ್ಯಾರಂಭ ಮಾಡಲಿದೆ. ಕೊಡಸಳ್ಳಿ ಯೋಜನೆಯ ಮೊದಲ ಘಟಕವು (40 ಮೆಗಾವಾಟ್) 1997ರ ಸೆಪ್ಟಂಬರ್‌ನಲ್ಲಿ ಕಾರ್ಯಾರಂಭ ಮಾಡಲಿದೆ. ಕದ್ರ ಎರಡನೇ ಘಟಕ (50 ಮೆಗಾವಾಟ್) ಮತ್ತು ಕೊಡಸಳ್ಳಿ ಎರಡನೇ ಘಟಕ (40 ಮೆಗಾವಾಟ್) 1998ರಲ್ಲಿ ಕಾರ್ಯಾರಂಭ

ಮಾಡುವ ನಿರೀಕ್ಷೆ ಇದೆ. ಕರ್ನಾಟಕ ವಿದ್ಯುತ್ ನಿಗಮವು ಬೆಂಗಳೂರು ಸಮೀಪ ಬಿಡದಿಯಲ್ಲಿ 300 ಮೆಗಾವಾಟ್ ಸಂಯೋಜಿತ ಆವರ್ತ ಸ್ಥಾವರದ ತನ್ನ ಮೊದಲನೇ ಜಂಟಿ ಉದ್ಯಮವನ್ನು ಅಂತಿಮಗೊಳಿಸುವ ಕಾರ್ಯದಲ್ಲಿದೆ. ಒಂದು ಹೊಸ ಕಂಪನಿಯನ್ನು ನೋಂದಾಯಿಸಲಾಗಿದೆ, ಜಂಟಿ ಉದ್ಯಮದ ಪಾಲುದಾರರನ್ನು ಗುರುತಿಸಲಾಗಿದೆ, ಭೂ ಸ್ವಾಧೀನ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ, ಎಲ್ಲಾ ಬಗೆಯ ಅನುಮೋದನೆ ಪಡೆಯಲಾಗಿದೆ ಮತ್ತು ಯೋಜನೆಯ ಅನುಷ್ಠಾನವು 1997ರ ಜೂನ್ ವೇಳೆಗೆ ಪ್ರಾರಂಭವಾಗುತ್ತದೆ. ಯೊಜನೆಯ ಅವಧಿ 24 ತಿಂಗಳುಗಳು ಮತ್ತು ವಿದ್ಯುತ್ ಸ್ಥಾವರವು 1999ರ ಜೂನ್ ವೇಳೆಗೆ ಕಾರ್ಯವನ್ನು ಪ್ರಾರಂಭಿಸುತ್ತದೆ.

13. ನವೀಕರಿಸಬಹುದಾದ ಶಕ್ತಿ ಮೂಲಗಳ ಮೂಲಕ ವಿದ್ಯುತ್ ಉತ್ಪಾದನೆಯ ವಿವಿಧ ಯೋಜನೆಗಳ ಮೇಲ್ವಿಚಾರಣೆ ಮಾಡಲು ಮತ್ತು ಅವುಗಳನ್ನು ಜಾರಿಗೊಳಿಸಲು ಒಂದು ಪ್ರತ್ಯೇಕ ಸಂಸ್ಥೆಯನ್ನು ಅಂದರೆ ಕರ್ನಾಟಕ ನವೀಕರಿಸಬಹುದಾದ ಶಕ್ತಿ ಮೂಲಗಳ ಅಭಿವೃದ್ಧಿ ಸಂಸ್ಥೆಯನ್ನು (ಕೆ.ಆರ್.ಇ.ಡಿ.ಎಲ್) ರಚಿಸಲಾಗಿದೆ. ವಾಯು ಶಕ್ತಿ, ಮಿನಿ ಮೈಕ್ರೊ ಜಲ ಯೋಜನೆಗಳು, ಸೌರ ಶಕ್ತಿ ಮತ್ತು ಸಹ-ಉತ್ಪಾದನಾ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡಲು ಈ ಕಂಪನಿಯು ಗಮನಹರಿಸುತ್ತದೆ.

14. ರಾಜ್ಯದ ಆಯ್ದ ರಸ್ತೆಗಳ ಸುಧಾರಣೆಗಾಗಿ ಒಂದು ಪ್ರಸ್ತಾವದ ಬಗ್ಗೆ ವಿಶ್ವಬ್ಯಾಂಕಿನ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಐದು ವರ್ಷಗಳ ಅವಧಿಯ ಈ ಯೋಜನೆಯ ಅಂದಾಜು ವೆಚ್ಚ 900.00 ಕೋಟಿ ರೂಪಾಯಿಗಳು. ರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣ, ಅಭಿವೃದ್ಧಿ ಮತ್ತು ನಿರ್ವಹಣೆ ಕಾರ್ಯದಲ್ಲಿ ಹಾಗೂ ವೆಚ್ಚಗಳನ್ನು ವಸೂಲಿ ಮಾಡುವಲ್ಲಿ ಖಾಸಗಿ ವಲಯವು ಪಾಲ್ಗೊಳ್ಳುವಂತೆ ಮಾಡುವ ಸಲುವಾಗಿ ಕರ್ನಾಟಕದಲ್ಲಿ ರಸ್ತೆಗಳು ಮತ್ತು ಹೆದ್ದಾರಿಗಳನ್ನು ನಿಯಂತ್ರಿಸುವ ಸಂಬಂಧಪಟ್ಟ ಅಧಿನಿಯಮವನ್ನು ತಿದ್ದುಪಡಿ ಮಾಡಲು ನಿರ್ಧರಿಸಲಾಗಿದೆ. ಗ್ರಾಮೀಣ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿಗಾಗಿ ನಬಾರ್ಡ್‌ನಿಂದ 50 ಕೋಟಿ ರೂಪಾಯಿಗಳ ಸಾಲ ತೆಗೆದುಕೊಳ್ಳಲಾಗುತ್ತಿದೆ.

15. ರಾಷ್ಟ್ರೀಯ ಹೆದ್ದಾರಿ -7 ರಲ್ಲಿರುವ ಬೆಂಗಳೂರು- ಹೊಸೂರು ವಿಭಾಗವನ್ನು, ನಾಲ್ಕು ಮಾರ್ಗಗಳ ವಾಹನ ಸಂಚಾರ ರಸ್ತೆಯನ್ನಾಗಿ ವಿಸ್ತರಿಸಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ- 13 ರಲ್ಲಿರುವ ಚಿತ್ರದುರ್ಗ-ಸೋಲಾಪುರ ವಿಭಾಗದ ಏಕಮಾರ್ಗವನ್ನು ಎರಡು-ಮಾರ್ಗಗಳ ರಸ್ತೆಯಾಗಿ ವಿಸ್ತರಿಸಲು ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆಯಲಾಗಿದೆ.

16. ಬೆಂಗಳೂರು ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಂತರ್‌ರಾಜ್ಯ ಸಂಚಾರದ ಮಾರ್ಗ ಬದಲಾಯಿಸುವ ಉದ್ದೇಶದಿಂದ 26 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ -4 ರಲ್ಲಿರುವ ದಾಬಸ್‌ಪೇಟೆಗೂ ಮತ್ತು ರಾಷ್ಟ್ರೀಯ ಹೆದ್ದಾರಿ -7 ರಲ್ಲಿರುವ ಅತ್ತಿಬೆಲೆಗೂ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಸುಧಾರಣೆ ಮಾಡುವ ಕಾರ್ಯವನ್ನು ಶೀಘ್ರದಲ್ಲಿಯೇ ಕೈಗೊಳ್ಳಲಾಗುವುದು. ಈ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರವು ಆರ್ಥಿಕ ಪ್ರಾಮುಖ್ಯತೆಯ ಯೋಜನೆಗಳಡಿಯಲ್ಲಿ ಅನುಮೋದನೆ ನೀಡಿದೆ. ಬೆಂಗಳೂರು ಅಭಿವೃದ್ಧಿ

ಪ್ರಾಧಿಕಾರಕ್ಕೆ/ಬೆಂಗಳೂರು ಮಹಾನಗರ ಪಾಲಿಕೆಗೆ ಬೇಕಾಗಿದ್ದ ಜಮೀನುಗಳಿಗೆ ಸಂಬಂಧಿಸಿದಂತೆ ಕೇಂದ್ರ ರಕ್ಷಣಾ ಪ್ರಾಧಿಕಾರಗಳೊಂದಿಗೆ ತುಂಬಾ ದಿನಗಳಿಂದ ಉಳಿದಿದ್ದ ವಿವಾದಗಳನ್ನು ಯಶಸ್ವಿಯಾಗಿ ಬಗೆಹರಿಸಲಾಗಿದೆ ಮತ್ತು ವರ್ತುಲ ರಸ್ತೆ ಯೋಜನೆ ಕಾಮಗಾರಿಯಲ್ಲಿ ಇನ್ನು ಮುಂದೆ ತೃಪ್ತಿಕರ ಪ್ರಗತಿ ಆಗುವುದೆಂದು ನಿರೀಕ್ಷಿಸಲಾಗಿದೆ.

17. ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಲು ಮತ್ತು ಪ್ರಯಾಣಿಕರಿಗೆ ಉತ್ತಮ ಸೇವೆಯನ್ನು ಒದಗಿಸಲು, ಈಗ ಇರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ನಾಲ್ಕು ಸ್ವಾಯತ್ತ ರಸ್ತೆ ಸಾರಿಗೆ ಸಂಸ್ಥೆಗಳನ್ನಾಗಿ ವಿಭಜಿಸಲು ನಿರ್ಧರಿಸಲಾಗಿದೆ.

18. ನಮ್ಮ ರಾಜ್ಯಕ್ಕೆ ಹಂಚಿಕೆ ಮಾಡಿರುವ 734 ಟಿ ಎಂಸಿ ನೀರಿನ ಪಾಲನ್ನು ರಾಜ್ಯವು ಸಂಪೂರ್ಣವಾಗಿ ಬಳಸಿಕೊಳ್ಳುವ ಸಲುವಾಗಿ ಕೃಷ್ಣಾ ಜಲಾನಯನ ಯೋಜನೆಗಳನ್ನು ಕ್ರಿ.ಶ. 2000ದ ಹೊತ್ತಿಗೆ ಪೂರ್ಣಗೊಳಿಸಲು ರಾಜ್ಯ ಸರ್ಕಾರವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ನಬಾರ್ಡ್ ಸಾಲ ನೆರವನ್ನು ಬಳಸಿಕೊಂಡು ಮೊದಲ ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ. ಹಣದ ಕೊರತೆಯಿಂದಾಗಿ ಅನೇಕ ವರ್ಷಗಳವರೆಗೆ ಅಪೂರ್ಣವಾಗಿದ್ದ 6 ಮಧ್ಯಮ ಯೋಜನೆಗಳನ್ನು ಮತ್ತು 88 ಸಣ್ಣ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಆರ್.ಐ.ಡಿ.ಎಫ್. ಹಂತ 1ರ ಅಡಿಯಲ್ಲಿ, 143.90 ಕೋಟಿ ರೂಪಾಯಿಗಳ ಸಾಲವನ್ನು ಪಡೆದು 1997ರ ಸೆಪ್ಟೆಂಬರ್ ಹೊತ್ತಿಗೆ ಮುಗಿಸಲಾಗುವುದು. ಆರ್.ಐ.ಡಿ.ಎಫ್. 2ನೇ ಹಂತದ ಕಾರ್ಯಕ್ರಮದಡಿಯಲ್ಲಿ 1999ರ ಮಾರ್ಚ್ ವೇಳೆಗೆ ಬೆಣ್ಣೆತೊರೆ ಯೋಜನೆಯನ್ನು ಪೂರ್ಣಗೊಳಿಸುವುದಕ್ಕಾಗಿ 50 ಕೋಟಿ ರೂಪಾಯಿಗಳ ಸಾಲದ ನೆರವನ್ನು ಪಡೆಯಲಾಗುತ್ತಿದೆ.

19. 1996-97ನೇ ಸಾಲಿನಲ್ಲಿ, 1996ರ ಅಕ್ಟೋಬರ್‌ವರೆಗೆ ಕಾವೇರಿ ಕಣಿವೆ ಯೋಜನೆಗಳಿಗೆ 191.60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈ ಕಣಿವೆ ಪ್ರದೇಶ ಯೋಜನೆಗಳ ಅನುಷ್ಠಾನವನ್ನು ತ್ವರಿತಗೊಳಿಸಲಾಗುತ್ತಿದೆ.

20. ಭಾರತ ಸರ್ಕಾರದ ತ್ವರಿತಗತಿಯ ನೀರಾವರಿ ಪ್ರಯೋಜನ ಕಾರ್ಯಕ್ರಮದ ಅಡಿಯಲ್ಲಿ ಮೂರು ಯೋಜನೆಗಳಾದ ಕೃಷ್ಣಾ ಮೇಲ್ದಂಡೆ ಯೋಜನೆಯ 1ನೇ ಹಂತದ 3ನೇ ಘಟಕ, ಮಲಪ್ರಭಾ ಹಾಗೂ ಹಿರೇಹಳ್ಳ ಯೋಜನೆಗಳಿಗಾಗಿ 1996-97ನೇ ಸಾಲಿನಲ್ಲಿ 122.50 ಕೋಟಿ ರೂಪಾಯಿಗಳ ಕೇಂದ್ರದ ಸಾಲ ನೆವರನ್ನು ಪಡೆಯಲು ಸಾಧ್ಯವಾಗಿದೆ. ಈ ನೆರವಿಗಾಗಿ ಇನ್ನೆರಡು ಯೋಜನೆಗಳನ್ನು ಹೆಸರಿಸಲಾಗಿದ್ದು, ಆ ಬಗ್ಗೆ ಭಾರತ ಸರ್ಕಾರದ ಅನುಮೋದನೆ ಪಡೆಯಲು ಪ್ರಯತ್ನಿಸಲಾಗುತ್ತಿದೆ.

21. ಒಂದು ಸಮಗ್ರ ನೀರಾವರಿ ಅಧಿನಿಯಮವನ್ನು ತರುವುದಕ್ಕಾಗಿ ಈಗಿರುವ ನೀರಾವರಿ ಅಧಿನಿಯಮಕ್ಕೆ ತಿದ್ದುಪಡಿಗಳನ್ನು ತರುವ ವಿಷಯವನ್ನು ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆ. ಉದ್ದೇಶಿತ ತಿದ್ದುಪಡಿಗಳಿಂದಾಗಿ ನೀರಿನ ಸಮರ್ಪಕ ಹಾಗೂ ಮಿತವ್ಯಯ ಬಳಕೆಯಾಗುವುದೆಂದು ನಿರೀಕ್ಷಿಸಲಾಗಿದ್ದು ಅದರಿಂದ ಬೆಳೆ ಮಾದರಿಯನ್ನು ನಿಯಂತ್ರಿಸಲು ಸಹಾಯವಾಗುವುದು. ಬೃಹತ್ ಹಾಗು ಮಧ್ಯಮ ನೀರಾವರಿ ಯೋಜನೆಗಳ ಅಡಿಯಲ್ಲಿನ ಎಲ್ಲ

ಅಂಶಗಳನ್ನು ರೈತರ ಸಂಘಗಳಿಗೆ ವಹಿಸಿಕೊಡಲು ಉದ್ದೇಶಿಸಲಾಗಿದೆ. ಅವುಗಳ ಕಾರ್ಯಾಚರಣೆ ಹಾಗೂ ನಿರ್ವಹಣೆ ಮತ್ತು ಸಂದಾಯ ಮಾಡಲು ಸಾಧ್ಯವಾಗುವ ಹಾಗೂ ಸಪ್ರಮಾಣವಾದ ನೀರಿನ ಶುಲ್ಕಗಳನ್ನು ವಿಧಿಸುವ ಹಾಗೂ ಅದನ್ನು ವಸೂಲಿ ಮಾಡುವ ಹಾಗೂ ಸ್ವನಿಯಂತ್ರಿತ ಬೆಳೆ ಮಾದರಿಯನ್ನು ಜಾರಿಗೆ ತರುವ ಹೊಣೆ ಈ ಸಂಘಗಳದ್ದಾಗಿರುತ್ತದೆ. ಇಂಥ ಉಪ-ಪದ್ಧತಿಗಳಿಗೆ ಒದಗಿಸುವಂಥ ಒಟ್ಟು ನೀರಿನ ಪ್ರಮಾಣದ ಮಿತಿಯೊಳಗೆ ರೈತರ ವರಮಾನವನ್ನು ಹೆಚ್ಚಿಸುವುದು ಮತ್ತು ನೀರಾವರಿ ವ್ಯವಸ್ಥೆಗಳನ್ನು ಆರ್ಥಿಕವಾಗಿ ಕಾರ್ಯ ಸಾಧ್ಯವಾಗುವಂತೆ ಮಾಡುವುದು ಈ ಸಹಭಾಗಿ ನೀರಾವರಿ ನಿರ್ವಹಣೆಯ ಕಾರ್ಯಕ್ರಮದ ಮುಖ್ಯ ಉದ್ದೇಶಗಳಲ್ಲಿ ಒಂದು.

22. ನಮ್ಮ ನಿರಂತರ ಪ್ರಯತ್ನಗಳಿಂದಾಗಿ, ವಿಶ್ವ ಬ್ಯಾಂಕು, 1995ರ ಸೆಪ್ಟೆಂಬರ್‌ನಿಂದ ಕೃಷ್ಣಾ ಮೇಲ್ದಂಡೆ ಯೋಜನೆ ಮೇಲೆ ವಿಧಿಸಿದ್ದ ನಿಷೇಧವನ್ನು 1996ರ ಅಕ್ಟೋಬರ್‌ನಲ್ಲಿ ತೆಗೆದುಹಾಕಿದೆ ಮತ್ತು ಈಗ ಪುನರ್‌ವಸತಿ ಹಾಗೂ ಮರು ವ್ಯವಸ್ಥೆ ಕಾಮಗಾರಿಗಳನ್ನು ತ್ವರಿತಗೊಳಿಸಲಾಗಿದೆ. ಅಲ್ಲದೆ, ಸರ್ಕಾರವು ಕಾವೇರಿ ಕಣಿವೆ ಪ್ರದೇಶದಲ್ಲಿನ ಹಳೆಯ ಅಣೆಕಟ್ಟು ಕಾಲುವೆಗಳಿಗೆ ಸುಧಾರಣಾ ಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ ವಿದೇಶಿ ನೆರವನ್ನು ಪಡೆದುಕೊಳ್ಳುವ ಸಾಧ್ಯತೆಗಳನ್ನು ಪರಿಶೀಲಿಸುತ್ತಿದೆ.

23. 32 ಕೋಟಿ ರೂಪಾಯಿಗಳ ವೆಚ್ಚದ ರಾಷ್ಟ್ರೀಯ ಜಲವಿಜ್ಞಾನ ಯೋಜನೆಯನ್ನು ವಿಶ್ವಬ್ಯಾಂಕ್ ನೆರವಿನೊಂದಿಗೆ ಕೈಗೊಳ್ಳಲಾಗುತ್ತಿದೆ. ರಾಜ್ಯದಲ್ಲಿ ಮೇಲ್ಮೈ ನೀರು ಹಾಗೂ ಅಂತರ್ಜಲ ವಿಷಯದಲ್ಲಿ ಜಲವಿಜ್ಞಾನ ಮತ್ತು ಜಲಪವನ ವಿಜ್ಞಾನ ಕುರಿತಂತೆ ಅಂಕಿ ಅಂಶಗಳ ಸಂಗ್ರಹಣೆ ಮಾಡುವ ಸಲುವಾಗಿ ಒಂದು ವಿಶ್ವಸನೀಯ ಮತ್ತು ಸುವ್ಯವಸ್ಥಿತ ಜಾಲವನ್ನು ಸ್ಥಾಪಿಸುವದೇ ಈ ಯೋಜನೆಯ ಮೂಲ ಉದ್ದೇಶ.

24. ರಾಜ್ಯ ಸರ್ಕಾರವು, ಭಾರತ ಸರ್ಕಾರವು ಅಂತಿಮಗೊಳಿಸುತ್ತಿರುವ ರಾಷ್ಟ್ರೀಯ ಸಹಕಾರ ಕಾರ್ಯನೀತಿಗೆ ಅನುಗುಣವಾಗಿ ರಾಜ್ಯಕ್ಕೆ ಸಂಬಂಧಿಸಿದಂತೆ ಸಹಕಾರ-ಕಾರ್ಯ ನೀತಿಯನ್ನು ಕಾರ್ಯಗತಗೊಳಿಸುವ ಪ್ರಯತ್ನದಲ್ಲಿ ಸಕ್ರಿಯವಾಗಿ ತೊಡಗಿದೆ. ಈ ಕಾರ್ಯನೀತಿಯನ್ನು ಅಳವಡಿಸಿಕೊಳ್ಳುವುದರಿಂದ ರಾಜ್ಯದ ಸಹಕಾರ ಸಂಸ್ಥೆಗಳನ್ನು ಪ್ರಜಾಸತ್ತಾತ್ಮಕ ಮತ್ತು ಸ್ವಾವಲಂಬಿ ಸಂಸ್ಥೆಗಳನ್ನಾಗಿ ಮಾಡಿದಂತಾಗುತ್ತದೆ. ಅವುಗಳನ್ನು ಫಲಾನುಭವಿಗಳೇ ನಡೆಸಿಕೊಂಡು ಹೋಗುತ್ತಾರೆ. ಸಹಕಾರಿ ಸಂಸ್ಥೆಗಳು ಆರ್ಥಿಕ ಉದ್ಯಮಗಳಾಗಿ ಸ್ವಾಯತ್ತವಾಗಿ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡುವುದು ಈ ಹೊಸ ಕಾರ್ಯ ನೀತಿಯ ಪ್ರಮುಖ ಲಕ್ಷಣವಾಗಿದೆ.

25. ಸರ್ಕಾರವು ರಾಜ್ಯದಲ್ಲಿ ಕೃಷಿಗೆ ಅತ್ಯಂತ ಹೆಚ್ಚಿನ ಆದ್ಯತೆಯನ್ನು ನೀಡಿದೆ. 1980ರ ದಶಕದಲ್ಲಿ ಕೃಷಿ ಉತ್ಪಾದನೆ, ಅದರಲ್ಲೂ ಆಹಾರಧಾನ್ಯಗಳ ಉತ್ಪಾದನೆ ಸ್ಥಗಿತವಾಗಿದ್ದಾಗ್ಯೂ, ತರುವಾಯದ ವರ್ಷಗಳಲ್ಲಿ ಗಣನೀಯ ಸುಧಾರಣೆ ಉಂಟಾಗಿದೆ. ಇದರಿಂದಾಗಿ ಬಹತೇಕ ಎಲ್ಲಾ ಬೆಳೆಗಳಲ್ಲಿ ಅದರಲ್ಲೂ ಕಬ್ಬಿನ ಬೆಳೆಯಲ್ಲಿ ಅಧಿಕ ಉತ್ಪಾದನೆ ಕಂಡುಬಂದಿದೆ. ಪ್ರಸಕ್ತ ವರ್ಷದಲ್ಲಿ ಆಹಾರಧಾನ್ಯ ಉತ್ಪಾದನೆಯಲ್ಲಿ ನಮ್ಮ ಗುರಿಯನ್ನು ಪೂರ್ಣವಾಗಿ ಸಾಧಿಸಲಾಗುವುದೆಂದು ನಿರೀಕ್ಷಿಸಲಾಗಿದೆ.

26. ರಾಜ್ಯದಲ್ಲಿ ಜಲಾನಯನ ಭೂಮಿಯ ಅಭಿವೃದ್ಧಿಗಾಗಿ ವಿಶ್ವ ಬ್ಯಾಂಕ್‌ನಿಂದ ಹಾಗೂ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯಿಂದ (ಒಡಿಎ) ವಿದೇಶಿ ಹಣಕಾಸು ನೆರವನ್ನು ಕೋರಲು ನನ್ನ ಸರ್ಕಾರವು ಪ್ರಸ್ತಾವನೆಗಳನ್ನು ರೂಪಿಸಿದೆ. ಇದರಿಂದ ಮಳೆ ಆಧಾರಿತ ಕೃಷಿ ಕ್ಷೇತ್ರವನ್ನು ಮತ್ತಷ್ಟು ವಿಸ್ತರಿಸಲು ಹಾಗೂ ಸುಧಾರಣೆ ಮಾಡಲು ಸಹಾಯಕವಾಗುವುದು.

27. ಹೊಸ ಕೈಗಾರಿಕಾ ಕಾರ್ಯನೀತಿಯಲ್ಲಿ ಸೇರಿಸಲು ಉದ್ದೇಶಿಸಿರುವ ವಿವಿಧ ಶಿಫಾರಸುಗಳ ಕಾರ್ಯಾನುಷ್ಠಾನವನ್ನು ನೋಡಿಕೊಳ್ಳುವ ಸಲುವಾಗಿ ನನ್ನ ಸರ್ಕಾರವು ರಚಿಸಿರುವ ಸಚಿವ ಸಂಪುಟ ಉಪ ಸಮಿತಿಯು ಶಿಫಾರಸುಗಳ ಅನುಷ್ಠಾನವನ್ನು ಗಂಭೀರವಾಗಿ ಪರಿಶೀಲಿಸುತ್ತಿದೆ. ಕೃಷಿ ಕಾರ್ಯನೀತಿಯಲ್ಲಿ ಪರ್ಯಾಲೋಚಿಸಲಾದಂತೆ, ರಾಜ್ಯದಲ್ಲಿ ಈಗಾಗಲೇ ಕರ್ನಾಟಕ ಕೃಷಿ ಉತ್ಪನ್ನ ರಫ್ತು ನಿಗಮವನ್ನು ಸ್ಥಾಪಿಸಲಾಗಿದೆ.

28. ಒಂದು ವರ್ಷಕ್ಕೆ 125 ಮಾರುಕಟ್ಟೆಗಳಂತೆ ನಾಲ್ಕು ವರ್ಷಗಳಲ್ಲಿ 90 ಕೋಟಿ ರೂಪಾಯಿಗಳ ಒಟ್ಟು ವೆಚ್ಚದಲ್ಲಿ ಗುರುತಿಸಲಾದ 500 ಗ್ರಾಮೀಣ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ ನಬಾರ್ಡ್‌ನ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಧಿಯಿಂದ (ಯೋಜನೆ-2) ನೆರವನ್ನು ಕೋರಲಾಗಿದೆ. ಬೆಂಗಳೂರಿನಲ್ಲಿ ಒಟ್ಟು 163 ಕೋಟಿ ರೂಪಾಯಿ ಬಂಡವಾಳ ವೆಚ್ಚದಲ್ಲಿ ಬೃಹತ್ ಮಾರುಕಟ್ಟೆಯೊಂದನ್ನು ಸ್ಥಾಪಿಸುವ ಕಾರ್ಯ ಕೈಗೊಳ್ಳಲಾಗುವುದು. ಆಹಾರ ಧಾನ್ಯಗಳು, ಹಣ್ಣುಗಳು ಮತ್ತು ತರಕಾರಿಗಳಿಗಾಗಿ ರೂಪಿಸಿದ ಈ ಯೋಜನೆಯ ಅಡಿಯಲ್ಲಿ, ಸಂಗ್ರಹಣೆ, ಶೀತಲೀಕರಣ ಮತ್ತು ತೂಕ ಮಾಡುವ ವ್ಯವಸ್ಥೆ ಹಾಗೂ ರಫ್ತು ವಹಿವಾಟಿಗೆ ನೆರವು ಮುಂತಾದ ಎಲ್ಲಾ ಆಧುನಿಕ ಸೌಲಭ್ಯಗಳೂ ಇರುವಂತಹ ಒಂದು ಪ್ರಧಾನ ಮತ್ತು ಏಳು ಉಪ ಮಾರುಕಟ್ಟೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಕಾಮಗಾರಿಗಳು, 2002ನೇ ಸಾಲಿನೊಳಗೆ ಪೂರ್ಣಗೊಳ್ಳುವುವೆಂದು ಅಂದಾಜು ಮಾಡಲಾಗಿದೆ.

29. 1995-96ರ ಅವಧಿಯಲ್ಲಿ ಕರ್ನಾಟಕದಿಂದ 7158 ಮೆಟ್ರಿಕ್ ಟನ್‌ಗಳಷ್ಟು ಸಾಗರ ಉತ್ಪನ್ನಗಳನ್ನು ರಫ್ತು ಮಾಡಿ ಸುಮಾರು 99 ಕೋಟಿ ರೂಪಾಯಿಗಳ ವಿದೇಶಿ ವಿನಿಮಯವನ್ನು ಗಳಿಸಲಾಗಿದೆ. ಮೀನು ಸಂಸ್ಕರಣೆ, ಸಂರಕ್ಷಣೆ ಮತ್ತು ಮಾರಾಟಕ್ಕೆ ಬೇಕಾದ ಮೂಲ ಸೌಲಭ್ಯಗಳನ್ನು ಇನ್ನೂ ಬಲಪಡಿಸಲು ಸಹ ಉದ್ದೇಶಿಸಲಾಗಿದೆ. ಮಂಜುಗಡ್ಡೆ ಸ್ಥಾವರಗಳು ಹಾಗೂ ಶೀತ ಸಂಗ್ರಹಾಲಯಗಳ ನಿರ್ಮಾಣ ಮತ್ತು ಚಿಲ್ಲರೆ ವ್ಯಾಪಾರ ಮಳಿಗೆಗಳ ಸ್ಥಾಪನೆ ಕಾರ್ಯವನ್ನು ಕೈಗೊಳ್ಳಲಾಗುವುದು. ಕರಾವಳಿ ಮೀನುಗಾರರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವ ಸಲುವಾಗಿ ಎನ್.ಸಿ.ಡಿ.ಸಿ. ನೆರವಿನೊಂದಿಗೆ 23.24 ಕೋಟಿ ರೂಪಾಯಿಗಳ ಒಟ್ಟು ವೆಚ್ಚದಲ್ಲಿ ಸಮಗ್ರ ಕಡಲ ಮೀನುಗಾರಿಕೆ ಯೋಜನೆಯನ್ನು ಕೈಗೊಳ್ಳಲಾಗುವುದು.

30. ನನ್ನ ಸರ್ಕಾರವು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಗುರಿಯನ್ನು ಸಾಧಿಸಲು ಕಂಕಣಬದ್ಧವಾಗಿದೆ. ಇದಕ್ಕಾಗಿ 1996-97ರ ಅವಧಿಯಲ್ಲಿ ರಾಜ್ಯದಲ್ಲಿ 5,000 ಉಪಾಧ್ಯಾಯರ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲಾಗಿದೆ. 18,650 ಪ್ರಾಥಮಿಕ ಶಾಲಾ ಉಪಾಧ್ಯಾಯರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. ಈ ಹುದ್ದೆಗಳಲ್ಲಿ ಶೇಕಡ 50ರಷ್ಟು ಹುದ್ದೆಗಳಿಗೆ ಉಪಾಧ್ಯಾಯಿನಿಯರನ್ನು ಆಯ್ಕೆ ಮಾಡಲಾಗಿದೆ.

31. ಈ ವರ್ಷದಲ್ಲಿ 873 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಇದರ ಜೊತೆಗೆ, 978 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತ ಪ್ರಾಥಮಿಕ ಶಾಲೆಗಳಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಪ್ರಸ್ತುತ ವರ್ಷದಲ್ಲಿ ಈವರೆವಿಗೂ ನಿರ್ಮಾಣ ಕೈಗೆತ್ತಿಕೊಂಡು ಅಪೂರ್ಣಗೊಂಡಿದ್ದ ಕೊಠಡಿಗಳೂ ಸೇರಿದಂತೆ 5046 ಕೊಠಡಿಗಳನ್ನು ಪೂರ್ಣಗೊಳಿಸಲಾಗಿದೆ. ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಅಗತ್ಯವಿರುವ ಬೋಧನಾ ಕಲಿಕೆ ಸಾಧನ ಸಾಮಗ್ರಿಗಳನ್ನು ಮತ್ತು ಪೀಠೋಪಕರಣಗಳನ್ನು ಒದಗಿಸುವ ಸಲುವಾಗಿ 43.80 ಕೋಟಿ ರೂಪಾಯಿಗಳ ಮೊತ್ತವನ್ನು ಒದಗಿಸಲಾಗಿದೆ ಮತ್ತು ಅಗತ್ಯ ಸಾಧನ ಸಾಮಗ್ರಿಗಳ ಸರಬರಾಜಿಗೆ ಕ್ರಮ ಕೈಗೊಳ್ಳಲಾಗಿದೆ.

32. 2500 ಸೆಕೆಂಡರಿ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಬಹುತೇಕ ಪೂರ್ಣಗೊಂಡಿದೆ. ಶೇಕಡ 30ರಷ್ಟು ಹುದ್ದೆಗಳನ್ನು ಮಹಿಳಾ ಅಭ್ಯರ್ಥಿಗಳಿಗೆ ಕಾದಿರಿಸಲಾಗಿದೆ. 864 ಕಿರಿಯ ಕಾಲೇಜು ಉಪನ್ಯಾಸಕರನ್ನು ಭರ್ತಿ ಮಾಡಿಕೊಳ್ಳುವ ಕಾರ್ಯವು ಅಂತಿಮ ಹಂತದಲ್ಲಿದೆ.

33. ಜನಾಂಗ ಸ್ಥಿತಿ ಸೂಚಕಗಳಿಗೆ ಸಂಬಂಧಿಸಿದಂತೆ ರಾಜ್ಯವು ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಕಳೆದ ವರ್ಷ, ಶಿಶು ಮರಣ ಪ್ರಮಾಣವು, ಹುಟ್ಟಿದ 1000 ಶಿಶುಗಳಿಗೆ 67ರಷ್ಟು ಇದ್ದು, ಅದು ಈ ವರ್ಷ 62ಕ್ಕೆ ಇಳಿದಿದೆ. ಇದು, ಪ್ರತಿ 1000ಕ್ಕೆ 73ರಷ್ಟಿರುವ ಜೀವಂತ ಶಿಶು ಜನನದ ರಾಷ್ಟ್ರೀಯ ಸರಾಸರಿಗೆ ಹೋಲಿಸಿದರೆ ಉತ್ತಮವಾಗಿದೆ. ಪ್ರಾಥಮಿಕ ಆರೋಗ್ಯ ರಕ್ಷಣೆಯ ಹಂತದಲ್ಲಿ, ಭಾರತ ಜನಸಂಖ್ಯಾ ಯೋಜನೆ VIII ಮತ್ತು IX ಮುಂತಾದ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ನಾವು ಮೂಲಭೂತ ಸೌಕರ್ಯಗಳನ್ನು ಮತ್ತು ಸೇವಾ ವಿತರಣಾ ವ್ಯವಸ್ಥೆಯನ್ನು ಸಾಕಷ್ಟು ಬಲಪಡಿಸಿದ್ದೇವೆ. ವಿಶ್ವಬ್ಯಾಂಕ್ ನೆರವು ಪಡೆದ, ಆರೋಗ್ಯ ರಕ್ಷಣಾ ಸೇವೆಯನ್ನು ಮಹಿಳೆಯರಿಗೆ ಮತ್ತು ಮಕ್ಕಳಿಗೆ ವಿಸ್ತರಿಸುವ ಪ್ರಜನನ ಮತ್ತು ಶಿಶು ಆರೋಗ್ಯ (ಆರ್‌ಸಿ ಎಚ್) ಎಂಬ ಹೊಸ ಯೋಜನೆಯು ಮುಂಬರುವ ವರ್ಷದಲ್ಲಿ ಪ್ರಾರಂಭವಾಗುವ ನಿರೀಕ್ಷೆಯಿದೆ. ನಾನು, ಕಳೆದ ವರ್ಷದ ನನ್ನ ಭಾಷಣದಲ್ಲಿ, ವಿಶ್ವಬ್ಯಾಂಕ್ ನೆರವಿನ 546 ಕೋಟಿ ರೂಪಾಯಿಗಳ ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯ ಬಗ್ಗೆ ಹೇಳಿದ್ದೆ. ಈ ಯೋಜನೆಯನ್ನು ಸನ್ಮಾನ್ಯ ಪ್ರಧಾನ ಮಂತ್ರಿಗಳು 1996ರ ಜೂನ್‌ನಲ್ಲಿ ಪ್ರಾರಂಭಿಸಿದರೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ನನಗೆ ಸಂತೋಷವಾಗುತ್ತಿದೆ. ಗುತ್ತಿಗೆ ಆಧಾರದ ಮೇಲೆ ವೈದ್ಯರುಗಳನ್ನು ನೇಮಕ ಮಾಡಿಕೊಳ್ಳುವುದಲ್ಲದೆ, ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 400 ವೈದ್ಯರುಗಳ ಹಾಗೂ ಗ್ರಾಮೀಣ ಮತ್ತು ನಗರಗಳ ಆಸ್ಪತ್ರೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬಲು ವಿವಿಧ ಪ್ರವರ್ಗಗಳ ಅರೆ ವೈದ್ಯಕೀಯ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯು ಮುಂದುವರಿದ ಹಂತ ತಲುಪಿದೆ.

34. ಸೌಕರ್ಯಗಳಿಂದ ವಂಚಿತರಾದವರಿಗಾಗಿ ಹಾಗೂ ಸಾಕಷ್ಟು ಸವಲತ್ತುಗಳ ಅವಕಾಶವಿಲ್ಲದವರಿಗಾಗಿ ಕರ್ನಾಟಕ ಸರ್ಕಾರವು ಹಮ್ಮಿಕೊಂಡ ಮುಖ್ಯ ಹಾಗೂ ಕಾರ್ಯಸಾಧ್ಯ ಕಾರ್ಯಕ್ರಮಗಳು ಭಾರತ ಸರ್ಕಾರದಿಂದ ಮನ್ನಣೆ ಪಡೆದಿರುವುದಷ್ಟೇ ಅಲ್ಲದೆ ರಾಷ್ಟ್ರೀಯ

ಕಾರ್ಯಕ್ರಮದ ಸ್ಥಾನವನ್ನೂ ಪಡೆದಿವೆ. ನಮ್ಮ ಹಳದಿ ಕಾರ್ಡು ಯೋಜನೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆರೋಗ್ಯ ರಕ್ಷಣೆ ನೀಡಿಕೆಯ ರಾಷ್ಟ್ರೀಯ ಯೋಜನೆಗೆ ಮಾದರಿಯಾಗಿದೆ. ಅದೇ ರೀತಿ, ಕೇಂದ್ರ ಸರ್ಕಾರವು, ಕ್ಯಾನ್ಸರ್, ಹೃದ್ರೋಗ ಸಂಬಂಧಿತ ಮತ್ತು ಮೂತ್ರಪಿಂಡ ಸಂಬಂಧಿತ ಕಾಯಿಲೆಗಳಂಥ ತೀವ್ರ/ಗಂಭೀರ ಸ್ವರೂಪದ ಅನಾರೋಗ್ಯದಿಂದ ನರಳುವ ಬಡಜನರಿಗಾಗಿ ನಮ್ಮ ರಾಜ್ಯದ್ದೇ ಆದ ವೈದ್ಯಕೀಯ ಪರಿಹಾರ ನಿಧಿಯನ್ನು ಮಾದರಿಯಾಗಿಟ್ಟುಕೊಂಡು ರಾಷ್ಟ್ರದ ಬಡಜನರಿಗಾಗಿ ವಿಶೇಷ ಅನಾರೋಗ್ಯಪೀಡಿತರ ನೆರವು ನಿಧಿಯನ್ನು (ಐ ಎ ಎಫ್) ಈಗ ಪ್ರಾರಂಭಿಸಿದೆ.

35. ನಮ್ಮ ಜನರಲ್ಲಿ ಬಡವರು ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ವಸತಿಯನ್ನು ಕಲ್ಪಿಸಿಕೊಡುವುದಕ್ಕೆ ನನ್ನ ಸರ್ಕಾರವು ಅತಿ ಹೆಚ್ಚಿನ ಆದ್ಯತೆ ನೀಡಿದೆ. 1996-97ನೇ ಸಾಲಿನಲ್ಲಿ, 1996ರ ಡಿಸೆಂಬರ್ ಅಂತ್ಯದ ವೇಳೆಗೆ ಆಶ್ರಯ ಯೋಜನೆ ಅಡಿಯಲ್ಲಿ 47,253 ಮನೆಗಳು ಮತ್ತು ಇಂದಿರಾ ಆವಾಸ್ ಯೋಜನೆ ಅಡಿಯಲ್ಲಿ 54,820 ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಡಾ|| ಅಂಬೇಡ್ಕರ್ ಯೋಜನೆ ಅಡಿಯಲ್ಲಿ 16,619 ಮನೆಗಳ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ಜೊತೆಗೆ 1,11,135 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. 1997-98ರಲ್ಲಿ ಈ ಕಾರ್ಯಕ್ರಮಗಳನ್ನು ಮತ್ತಷ್ಟು ಬಲಪಡಿಸಲು ನಾವು ಉದ್ದೇಶಿದ್ದೇವೆ. ಈ ಗುರಿಗಳನ್ನು ಸಾಧಿಸಲು ಗಣನೀಯವಾಗಿ ಹೆಚ್ಚಿನ ಗುರಿಗಳನ್ನು ಇಟ್ಟುಕೊಳ್ಳಲಾಗುವುದು ಹಾಗೂ ಈ ಗುರಿಗಳನ್ನು ಸಾಧಿಸಲು ಭಾವೀ ಫಲಾನುಭವಿಗಳ ಸಹಕಾರದಿಂದ ಸತತ ಪ್ರಯತ್ನ ಮಾಡಲಾಗುವುದು.

36. ನನ್ನ ಸರ್ಕಾರ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತರ ಕಲ್ಯಾಣಕ್ಕೆ ಬದ್ಧವಾಗಿದೆ. ಶಿಕ್ಷಣ, ವಸತಿ, ನೀರಾವರಿ ಮತ್ತು ಆದಾಯ ದೊರಕಿಸಿಕೊಡುವಂತಹ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.

37. 1997-98ರಲ್ಲಿ ಅಖಿಲ ಭಾರತ ಸಿವಿಲ್ ಸೇವಾ ಪರೀಕ್ಷೆ ತೆಗೆದುಕೊಂಡಿರುವ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಪ್ರತಿಭಾವಂತ ಅಭ್ಯರ್ಥಿಗಳಿಗೆ ಖ್ಯಾತ ಹಾಗೂ ಜನಪ್ರಿಯವಾದ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ತರಬೇತಿ ನೀಡಲು ನಾವು ಉದ್ದೇಶಿಸಿದ್ದೇವೆ. ಸಾಕಷ್ಟು ಸವಲತ್ತುಗಳ ಅವಕಾಶಗಳಿಲ್ಲದ ಈ ವರ್ಗಗಳ ಕಲ್ಯಾಣಕ್ಕಾಗಿ ಕೈಗೊಳ್ಳಲು ಉದ್ದೇಶಿಸಲಾಗಿರುವ ಕಾರ್ಯಕ್ರಮಗಳೆಂದರೆ-**ನವಚೇತನ** ಯೋಜನೆಯ ಅಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಯುವಕರಿಗೆ ತರಬೇತಿ ನೀಡುವುದು, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳವರಿಗೆ ಸುಮಾರು 75000 ಮನೆಗಳನ್ನು ನಿರ್ಮಾಣ ಮಾಡುವುದು ಮತ್ತು 20,000 ಎಕರೆಗಳಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ನೀರಾವರಿ ಬಾವಿಗಳನ್ನು ತೆಗೆಯುವುದು.

38. ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿಗಳ ಮತ್ತು ಪಂಗಡಗಳವರನ್ನು ಮೇಲೆತ್ತುವ ಕ್ರಮವಾಗಿ ಶಿಕ್ಷಣದ ಮಹತ್ವವನ್ನು ಗಮನಿಸಿ ನನ್ನ ಸರ್ಕಾರ ಪ್ರಸಕ್ತ ವರ್ಷದಲ್ಲಿ ಹೆಚ್ಚಿನ ಸಂಖ್ಯೆಯ

ವಿದ್ಯಾರ್ಥಿ ನಿಲಯಗಳನ್ನು ಮತ್ತು ನಿವಾಸಿ ಶಾಲೆಗಳನ್ನು ಮಂಜೂರು ಮಾಡಿದೆ. 75 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು, 50 ಮೆಟ್ರಿಕ್ ತರುವಾಯದ ವಿದ್ಯಾರ್ಥಿ ನಿಲಯಗಳನ್ನು ಮತ್ತು 49 ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಹೊಸ ವಿದ್ಯಾರ್ಥಿನಿಲಯಗಳಲ್ಲದೆ 692 ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ವಿದ್ಯಾರ್ಥಿಗಳಿಗೆ ಮತ್ತು 5,000 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಕಲ್ಪಿಸಲು 1996-97 ರಲ್ಲಿ ಈಗಿರುವ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. 1-1-1997 ರಿಂದ ಜಾರಿಗೆ ಬರುವಂತೆ ವಿದ್ಯಾರ್ಥಿ ನಿಲಯಗಳ ನಿವಾಸಿಗಳ ಆಹಾರದ ವೆಚ್ಚವನ್ನು ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ತಿಂಗಳಿಗೆ 250-00 ರೂಪಾಯಿಗಳಿಂದ 350-00 ರೂಪಾಯಿಗಳಿಗೆ ಮತ್ತು ಮೆಟ್ರಿಕ್ ತರುವಾಯದ ವಿದ್ಯಾರ್ಥಿಗಳಿಗೆ 300-00 ರೂಪಾಯಿಗಳಿಂದ 400-00 ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

39. ಕರ್ನಾಟಕ ಹಿಂದುಳಿದ ವರ್ಗಗಳ ನಿಗಮವು ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಅಭಿವೃದ್ಧಿ ನಿಧಿಯಿಂದ ಹಣವನ್ನು ಪಡೆಯಲು ಸಾಧ್ಯವಾಗುವಂತೆ, ಅದಕ್ಕೆ 58 ಕೋಟಿ ರೂಪಾಯಿಗಳವರೆಗಿನ ಸರ್ಕಾರಿ ಭದ್ರತೆಯನ್ನು ಒದಗಿಸಲಾಗಿದೆ. ಈ ಹಣವನ್ನು ಹಿಂದುಳಿದ ವರ್ಗಗಳ ಸ್ವಯಂ ಉದ್ಯೋಗ ಕಾರ್ಯಕ್ರಮಗಳಿಗಾಗಿ ಉಪಯೋಗಿಸಲಾಗುವುದು.

40. ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, 4,08,977 ಪರಿಶಿಷ್ಟ ಜಾತಿಗಳ ಜನರಿಗೆ ಮತ್ತು 34,055 ಪರಿಶಿಷ್ಟ ಪಂಗಡಗಳ ಜನರಿಗೆ ಹಣಕಾಸಿನ ನೆರವು ಒದಗಿಸಿದ್ದು, ಇದಕ್ಕಾಗಿ ಇಲ್ಲಿಯತನಕ 173 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ.

41. ಸರ್ಕಾರವು, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಡಿ ವಿವಿಧ ಉದ್ಯೋಗಾಧಾರಿತ ತರಬೇತಿ ಕಾರ್ಯಕ್ರಮಗಳಿಗಾಗಿ 28 ಲಕ್ಷ ರೂಪಾಯಿಗಳ ಸಹಾಯಾನುದಾನವನ್ನು ಮೀಸಲಿರಿಸಿದೆ. ಇಲ್ಲಿಯವರೆಗೆ, 13 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಹಿಂದುಳಿದ ವರ್ಗಗಳ 1058 ಯುವಜನರನ್ನು ತರಬೇತಿಗಾಗಿ ಕಳಿಸಲಾಗಿದೆ.

42. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು, ಅಲ್ಪ ಸಂಖ್ಯಾತರಿಗೆ ವೃತ್ತಿಪರ ತರಬೇತಿ, ಮೋಟಾರು ಡ್ರೈವಿಂಗ್ ತರಬೇತಿ, ಫೋರ್‌ಮನ್‌ಶಿಪ್ ತರಬೇತಿ ಪಡೆಯಲು ಸಾಧ್ಯ ಮಾಡಿಕೊಡುವ ಸಲುವಾಗಿ ಹಾಗೂ ಗಂಗಾ ಕಲ್ಯಾಣ ಯೋಜನೆಗಾಗಿ ಮೂಲ ಬಂಡವಾಳ ಧನವನ್ನು ಹಾಗೂ ಕಡಿಮೆ ಬಡ್ಡಿ ದರಗಳಲ್ಲಿ ಸಾಲುಗಳನ್ನು ಒದಗಿಸುತ್ತಿದೆ.

43. ಇತ್ತೀಚೆಗೆ, ನನ್ನ ಸರ್ಕಾರವು ಕೃಷಿ ಅಭಿವೃದ್ಧಿಗಾಗಿ ಅಂತರ ರಾಷ್ಟ್ರೀಯ ಹಣಕಾಸು ನಿಧಿಯೊಂದಿಗೆ ಹಾಗೂ ತುಮಕೂರು, ಬಿಜಾಪುರ, ಬಳ್ಳಾರಿ ಮತ್ತು ಚಿತ್ರದುರ್ಗದ ನಾಲ್ಕು ಜಿಲ್ಲೆಗಳಲ್ಲಿ 24,000 ಮಹಿಳಾ ಫಲಾನುಭವಿಗಳಿಗೆ ನೆರವು ನೀಡುವ ಯೋಜನೆಗೆ ವಿಶ್ವಬ್ಯಾಂಕ್‌ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಯೋಜನಾ ವೆಚ್ಚ 39.15 ಕೋಟಿ ರೂಪಾಯಿ. ಈ ಯೋಜನೆಯು ಸ್ವಾವಲಂಬಿ ಮತ್ತು ಆರ್ಥಿಕವಾಗಿ ಸ್ವತಂತ್ರರಾದ ಮಹಿಳಾ ಸಮೂಹಗಳನ್ನು ರಚಿಸುವ ಕಾರ್ಯತಂತ್ರವನ್ನು ಅಳವಡಿಸಿಕೊಂಡಿದೆ. ಕಳೆದ ವರ್ಷ ರಚಿಸಲಾದ ರಾಜ್ಯ ಮಹಿಳಾ

ಆಯೋಗವು, ಮಹಿಳೆಯರಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅಧ್ಯಯನ ಮಾಡಿ ಮಹಿಳೆಯರ ಸ್ಥಾನಮಾನಗಳನ್ನು ಸುಧಾರಿಸುವುದಕ್ಕಾಗಿ ಕಾರ್ಯನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಸೂಚಿಸುವುದು.

44. ಗ್ರಾಮೀಣ ಪ್ರದೇಶಗಳಲ್ಲಿ, ಯುವಜನ ಕೇಂದ್ರಗಳ ಪದಾಧಿಕಾರಿಗಳಿಗಾಗಿ **'ಯುವಚೇತನ'** ಎಂಬ ವ್ಯಕ್ತಿತ್ವ ವಿಕಸನ ಕುರಿತ ವ್ಯವಸ್ಥಿತ ತರಬೇತಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಈ ಕಾರ್ಯಕ್ರಮದಡಿಯಲ್ಲಿ ಗ್ರಾಮೀಣ ಪ್ರದೇಶದ ಯುವಜನರಿಗೆ ಮುಖಂಡತ್ವ, ಸ್ವಾಭಿಮಾನ, ಭಾಷಣ ಕಲೆ ಮತ್ತು ಸಮೂಹ ಸಂಘಟನಾ ಸಾಮರ್ಥ್ಯ ಮುಂತಾದ ವ್ಯಕ್ತಿತ್ವ ವಿಕಸನದ ನಾಲ್ಕು ಮುಖ್ಯ ಅಂಶಗಳ ಬಗ್ಗೆ ತರಬೇತಿ ನೀಡಲಾಗುವುದು.

45. ನನ್ನ ಸರ್ಕಾರವು ಭಾರತದ ಒಲಿಂಪಿಕ್ ಸಂಸ್ಥೆಯೊಂದಿಗೆ ಸಮಾಲೋಚಿಸಿ, ನಾಲ್ಕನೇ ರಾಷ್ಟ್ರೀಯ ಕ್ರೀಡಾಕೂಟವನ್ನು 1997ರ ಮೇ 18 ರಿಂದ 29ರವರೆಗೆ ಬೆಂಗಳೂರು ಮತ್ತು ಮೈಸೂರಿನಲ್ಲಿ ನಡೆಸಲು ತೀರ್ಮಾನಿಸಿದೆ. ಈ ಉದ್ದೇಶಕ್ಕಾಗಿ, 100 ಕೋಟಿ ರೂಪಾಯಿಗಳ ಹಣಕಾಸು ವೆಚ್ಚದಲ್ಲಿ ಅಂತರ ರಾಷ್ಟ್ರೀಯ ಗುಣಮಟ್ಟದ ಕ್ರೀಡಾ ಮೂಲಭೂತ ಸೌಲಭ್ಯಗಳು ಸಿದ್ಧವಾಗುತ್ತಿವೆ.

46. ನನ್ನ ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗಾಗಿ ರಾಜಕೀಯ ಅಧಿಕಾರ ಸ್ಥಾನಗಳಲ್ಲಿ ಮೀಸಲಾತಿ ಒದಗಿಸುವ ನೀತಿಯನ್ನು ಇನ್ನಷ್ಟು ಬಲಪಡಿಸಲು ಇತ್ತೀಚೆಗೆ ತಿದ್ದುಪಡಿಯೊಂದನ್ನು ತಂದಿದೆ. 1996ರ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮದಿಂದಾಗಿ ಐದು ವರ್ಷಗಳ ಒಂದು ಅವಧಿಯಲ್ಲಿ ಕನಿಷ್ಠಪಕ್ಷ ಮೀಸಲಾತಿಯ ಮೂರು ಪ್ರವರ್ಗಗಳ ಸದಸ್ಯರಿಗೆ ಜಿಲ್ಲಾ, ತಾಲ್ಲೂಕು ಪಂಚಾಯತಿಗಳಲ್ಲಿ ಅಧ್ಯಕ್ಷ/ ಉಪಾಧ್ಯಕ್ಷ ಪದವಿ ದೊರಕುವುದು ಸಾಧ್ಯವಾಗಿದೆ. ಅಧ್ಯಕ್ಷ/ ಉಪಾಧ್ಯಕ್ಷರನ್ನು ಪ್ರತಿ ಇಪ್ಪತ್ತು ತಿಂಗಳಿಗೊಮ್ಮೆ ಸರದಿಯ ಮೇಲೆ ಬದಲಾಯಿಸುವುದಕ್ಕೆ ಅವಕಾಶ ಕಲ್ಪಿಸಿರುವುದರಿಂದ ಅದು ಸಾಧ್ಯವಾಗಿದೆ.

47. ಮುಂದಿನ ಎರಡು ವರ್ಷಗಳೊಳಗೆ ಎಲ್ಲ ವಾಸಸ್ಥಳಗಳಿಗೆ ಸಾಕಷ್ಟು ನೀರು ಸರಬರಾಜು ಸೌಲಭ್ಯ ದೊರೆಯುವಂತೆ ಮಾಡುವುದು ನನ್ನ ಸರ್ಕಾರದ ಗುರಿ. ರಾಜ್ಯದ ಎಲ್ಲ ಗ್ರಾಮಾಂತರ ವಾಸಸ್ಥಳಗಳ ಸಮಗ್ರ ಸಮೀಕ್ಷೆಯನ್ನು ಈಗಷ್ಟೇ ಪೂರ್ಣಗೊಳಿಸಿರುವ ಜನಾರೋಗ್ಯ ಇಂಜನಿಯರಿಂಗ್ ಇಲಾಖೆಯು ಈ ಉದ್ದೇಶಕ್ಕಾಗಿ ಸವಿವರ ನಕ್ಷೆಗಳನ್ನು ತಯಾರಿಸುತ್ತಿದೆ ಎಂಬ ವಿಚಾರವನ್ನು ಮಾನ್ಯ ಸದಸ್ಯರಿಗೆ ತಿಳಿಸಲು ನನಗೆ ಸಂತೋಷವಾಗುತ್ತಿದೆ.

48. **''ನಿರ್ಮಲ ಗ್ರಾಮ ಯೋಜನೆ''**, ಅಡಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು 1996ರ ಸೆಪ್ಟೆಂಬರ್ ಅಂತ್ಯದ ವೇಳೆಗೆ 2.3 ಲಕ್ಷ ಮನೆಗಳಿಗೆ ಶೌಚಾಲಯಗಳನ್ನು ನಿರ್ಮಿಸಿ ಕೊಟ್ಟಿವೆ. ಈ ಸಂಖ್ಯೆಯು ಹಿಂದಿನ ಹತ್ತು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ನಿರ್ಮಿಸಲಾದ ಶೌಚಾಲಯಗಳ ಸಂಖ್ಯೆಯ ಎರಡು ಪಟ್ಟಿಗಿಂತಲೂ ಹೆಚ್ಚಾಗಿದೆ.

49. ನಗರಾಭಿವೃದ್ಧಿ ಕ್ಷೇತ್ರದಲ್ಲಿ ನೀರು ಸರಬರಾಜು ಯೋಜನೆಗಳಿಗೆ ಹಣಕಾಸು ಒದಗಿಸಲು ಮತ್ತು ಅವುಗಳನ್ನು ಜಾರಿಗೊಳಿಸಲು ನನ್ನ ಸರ್ಕಾರ ಒಂದು ಸಮಗ್ರ ನೀತಿಯನ್ನು ರೂಪಿಸಿದೆ. ಸಣ್ಣ ಪಟ್ಟಣಗಳಿಗೆ, ರಾಜ್ಯ ಸರ್ಕಾರದ ಪಾಲನ್ನು ಈ ಹಿಂದೆ ಸಾಲ ರೂಪವಾಗಿ ಒದಗಿಸಲಾಗುತ್ತಿದ್ದು ಈಗ ಅದನ್ನು ಅನುದಾನವನ್ನಾಗಿ ಪರಿವರ್ತಿಸಲಾಗಿದೆ ಮತ್ತು ಅದನ್ನು ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ಬೆಂಗಳೂರು, ಮೈಸೂರು, ರಾಮನಗರಂ, ಚನ್ನಪಟ್ಟಣ ಮತ್ತು ತುಮಕೂರುಗಳಂಥ ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ಕೈಗೊಳ್ಳಲಾಗಿರುವ, ಈಗ ನೆರವು ಪಡೆಯುತ್ತಿರುವ ಮತ್ತು ವಿದೇಶಿ ನೆರವು ಪಡೆದ ಕಾರ್ಯಕ್ರಮಗಳ ಜೊತೆಗೆ, ನನ್ನ ಸರ್ಕಾರ, ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ನೆರವಿನೊಂದಿಗೆ ಪಶ್ಚಿಮ ಕರಾವಳಿಯ ಜಿಲ್ಲೆಗಳಲ್ಲಿ ನಗರಾಭಿವೃದ್ಧಿ ಯೋಜನೆಯನ್ನು ಕೈಗೊಳ್ಳುವ ಬಗ್ಗೆ ಮಾತುಕತೆ ನಡೆಸುತ್ತಿದೆ. ಯೋಜನೆಯನ್ನು ಸಿದ್ಧಪಡಿಸಲು ಅಗತ್ಯವಾದ ತಾಂತ್ರಿಕ ನೆರವನ್ನು ಒದಗಿಸಲಾಗಿದೆ. ಅಲ್ಲದೆ ಹಲವಾರು ನಗರಗಳು ಮತ್ತು ಪಟ್ಟಣಗಳಲ್ಲಿನ ಸಮಗ್ರ ನಗರಾಭಿವೃದ್ಧಿ ಯೋಜನೆಗಾಗಿ ವಿಶ್ವಬ್ಯಾಂಕ್ ನೆರವನ್ನು ಕೋರಲು ಸಹ ಉದ್ದೇಶಿಸಲಾಗಿದೆ.

50. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕಾರ್ಮಿಕರಿಗೆ ಉದ್ಯೋಗ ಸೃಜಿಸುವ ಕಾರ್ಯಕ್ರಮಕ್ಕೆ ಪ್ರಾಮುಖ್ಯತೆ ನೀಡುವುದನ್ನು ನನ್ನ ಸರ್ಕಾರ ಮುಂದುವರೆಸಿದೆ. ಈ ವರ್ಷದಲ್ಲಿ ನಾವು ಸುಮಾರು 222 ಕೋಟಿ ರೂಪಾಯಿ ವೆಚ್ಚ ಮಾಡಿ 500 ಲಕ್ಷ ಮಾನವ ದಿವಸಗಳನ್ನು ಸೃಜಿಸುವವರಿದ್ದೇವೆ. ಉದ್ಯೋಗ ಭರವಸೆ ಯೋಜನೆಯನ್ನು ಇತ್ತೀಚೆಗೆ 20 ತಾಲ್ಲೂಕುಗಳಿಗೆ ವಿಸ್ತರಿಸಲಾಗಿದೆ. ಇದರಿಂದಾಗಿ ರಾಜ್ಯದ 175 ತಾಲ್ಲೂಕುಗಳ ಪೈಕಿ 162 ತಾಲ್ಲೂಕುಗಳು, ಗ್ರಾಮೀಣ ಪ್ರದೇಶಗಳಲ್ಲಿ ಮಜೂರಿ ಉದ್ಯೋಗಗಳನ್ನು ಕಲ್ಪಿಸುವುದಕ್ಕಾಗಿ ಮತ್ತು ಸಾರ್ವಜನಿಕ ಸ್ವತ್ತುಗಳ ಸೃಜನೆಗಾಗಿ ಗಣನೀಯವಾಗಿ ಸಂಪನ್ಮೂಲಗಳನ್ನು ಒದಗಿಸುವಂಥ ಕೇಂದ್ರ ಪುರಸ್ಕೃತ ಯೋಜನೆಯ ಅಡಿಯಲ್ಲಿ ಬರುತ್ತವೆ.

51. ಖಾಸಗಿ ವಲಯ ಘಟಕಗಳನ್ನು ತೊಡಗಿಸಿಕೊಂಡು ಮಾದರಿ ಗ್ರಾಮದ ಅಭಿವೃದ್ಧಿ ಸಾಧಿಸಲು ಉದ್ದೇಶಿಸಿರುವಂಥ 'ಸ್ವಸ್ತಿ' ಗ್ರಾಮ ಯೋಜನೆಯನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ.

52. ರಾಜ್ಯದಲ್ಲಿ ಅರಣ್ಯ ಪ್ರದೇಶವನ್ನು ಹೆಚ್ಚಿಸುವುದಕ್ಕಾಗಿ ಜಪಾನಿನ ಓಇಸಿಎಫ್ ಸಂಸ್ಥೆಯಿಂದ ಹಣಕಾಸು ನೆರವು ಪಡೆದು ರಾಜ್ಯದ 135 ಶುಷ್ಕ ತಾಲ್ಲೂಕುಗಳಲ್ಲಿ 565 ಕೋಟಿ ರೂಪಾಯಿಗಳ ವೆಚ್ಚದ ''ಅರಣ್ಯ ನಿರ್ಮಾಣ ಹಾಗೂ ಪರಿಸರ ಯೋಜನೆ'' ಎಂಬ ಯೋಜನೆಯನ್ನು ಐದು ವರ್ಷಗಳ ಅವಧಿಯೊಳಗೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

53. ಒಂಬತ್ತನೇ ಪಂಚವಾರ್ಷಿಕ ಯೋಜನೆಯ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲಿ ಪ್ರವಾಸೋದ್ಯಮದ ಸಮಗ್ರ ಅಭಿವೃದ್ಧಿಗಾಗಿ 1996ರ ಡಿಸೆಂಬರ್‌ನಲ್ಲಿ 5 ವರ್ಷಗಳ ಅವಧಿಯ ಪರಿಷ್ಕೃತ ಬೃಹತ್ ಯೋಜನೆಯೊಂದನ್ನು ಪ್ರವಾಸೋದ್ಯಮ ಇಲಾಖೆಯು ಸಿದ್ಧಪಡಿಸಿದೆ. ಸದರಿ ವರ್ಷದಲ್ಲಿ 16 ಹೋಟೆಲ್ ಯೋಜನೆಗಳಿಗೆ

ಬಂಡವಾಳ ಸಬ್ಸಿಡಿ ಮಂಜೂರು ಮಾಡಲಾಗಿದೆ. 15 ಕೋಟಿ ರೂಪಾಯಿಗಳ ಹಣ ಹೂಡಿಕೆಯುಳ್ಳ 31 ಹೋಟೆಲ್ ಯೋಜನೆಗಳನ್ನು ಸಹ ಇಲಾಖೆಯು ಅನುಮೋದಿಸಿದೆ. 375.49 ಕೋಟಿ ರೂಪಾಯಿಗಳ ಹಣ ಹೂಡಿಕೆಯ ಹನ್ನೆರಡು ಬೃಹತ್ ಪ್ರವಾಸೋದ್ಯಮ ಯೋಜನೆಗಳಿಗೆ ಈ ಉದ್ದೇಶಕ್ಕಾಗಿ ಸ್ಥಾಪಿಸಲಾಗಿರುವ ಏಕಗವಾಕ್ಷಿ ಏಜೆನ್ಸಿಯಲ್ಲಿ ಮಂಜೂರಾತಿ ನೀಡಲಾಗಿದೆ. 396 ಕೋಟಿ ರೂಪಾಯಿ ವೆಚ್ಚದ ಹಂಪೆ ಸಮಗ್ರ ಅಭಿವೃದ್ಧಿ ಕುರಿತ ವ್ಯಾಪಕ ಯೋಜನೆಯನ್ನು ಜಪಾನಿನ ಓಇಸಿಎಫ್‌ನಿಂದ ಆರ್ಥಿಕ ನೆರವನ್ನು ಪಡೆಯುವ ಸಲುವಾಗಿ ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ.

54. ರಾಜ್ಯ ಸರ್ಕಾರವು ಕೈಗಾರಿಕಾ ಅಭಿವೃದ್ಧಿಯನ್ನು ತೀವ್ರಗೊಳಿಸುವ ಸಲುವಾಗಿ ಮತ್ತು ದೇಶದ ಕೈಗಾರಿಕಾ ಭೂಪಟದಲ್ಲಿ ರಾಜ್ಯಕ್ಕೆ ಪ್ರಮುಖ ಸ್ಥಾನ ದೊರಕಿಸಿಕೊಡುವ ದೃಷ್ಟಿಯಿಂದ **''ಹೊಸ ಕೈಗಾರಿಕಾ ನೀತಿ - 1996''** ನ್ನು ಪ್ರಕಟಿಸಿದೆ. ಭಾರತೀಯ ಅರ್ಥ ವ್ಯವಸ್ಥೆಯನ್ನು ಮುಕ್ತಗೊಳಿಸಿದ್ದರಿಂದಾಗಿ ಮತ್ತು ನನ್ನ ಸರ್ಕಾರದ ಪ್ರಗತಿಪರ ಕಾರ್ಯನೀತಿಗಳ ಪರಿಣಾಮವಾಗಿ ನಮ್ಮ ರಾಜ್ಯದಲ್ಲಿ ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ - ಧಾರವಾಡಗಳಂಥ ಅಭಿವೃದ್ಧಿ ಕೇಂದ್ರಗಳಲ್ಲಿ ಉನ್ನತ ತಂತ್ರಜ್ಞಾನದ ಹಾಗೂ ಇತರ ಭಾರೀ ಪ್ರಮಾಣದ ಮತ್ತು ಆಧುನಿಕ ಕೈಗಾರಿಕೆಗಳನ್ನು ಹೆಚ್ಚು ಸಂಖ್ಯೆಯಲ್ಲಿ ಪ್ರಾರಂಭಿಸಲಾಗುತ್ತಿದೆ. ವಾಸ್ತವವಾಗಿ, ಹಲವಾರು ಪ್ರತಿಷ್ಠಿತ ವಿದೇಶಿ ಕಂಪೆನಿಗಳು ಭಾರತ ಅಂಗಸಂಸ್ಥೆಗಳೊಂದಿಗೆ ಕರ್ನಾಟಕದಲ್ಲಿ ತಯಾರಿಕಾ ನೆಲೆಗಳನ್ನು ಸ್ಥಾಪಿಸಲು ನಿರ್ಧರಿಸಿವೆ. ಕರ್ನಾಟಕವು ಅತಿ ಶೀಘ್ರದಲ್ಲಿಯೇ ಆಟೋಮೋಬೈಲ್ ಉದ್ಯಮದಲ್ಲಿ ಅತ್ಯಂತ ಪ್ರಮುಖ ಕೇಂದ್ರವಾಗಲಿದೆ ಎಂಬುದನ್ನು ತಿಳಿಸಲು ನನಗೆ ಸಂತೋಷವಾಗುತ್ತಿದೆ. ವಾಲ್ವೊ, ಟೆಲ್ಕೋ, ಟಿವಿಎಸ್ ಸುಜುಕಿಗಳಂಥ ಪ್ರಖ್ಯಾತ ಕಂಪೆನಿಗಳು ನಮ್ಮ ರಾಜ್ಯದಲ್ಲಿ ಭಾರಿ ಔದ್ಯಮಿಕ ಘಟಕಗಳನ್ನು ಸ್ಥಾಪಿಸಲು ನಿರ್ಧರಿಸಿವೆ. ಅದೇ ರೀತಿ, ಕಬ್ಬಿಣ ಮತ್ತು ಉಕ್ಕು ಉದ್ಯಮದಲ್ಲಿ ಬಳ್ಳಾರಿ-ಹೊಸಪೇಟೆ ಪ್ರದೇಶವು ರಾಷ್ಟ್ರದಲ್ಲೇ ಅತಿ ದೊಡ್ಡ ಕೇಂದ್ರಗಳಲ್ಲೊಂದಾಗಲಿದೆ. ಹಾಗೆಯೇ ಮಂಗಳೂರು ಪ್ರದೇಶವು ಸಂಸ್ಕರಣ, ವಿದ್ಯುಚ್ಛಕ್ತಿ ಮತ್ತು ಇಂಜಿನಿಯರಿಂಗ್ ಉದ್ಯಮ ಆಧಾರಿತ ಆಧುನಿಕ ಕರಾವಳಿ ಕೇಂದ್ರವಾಗಿ ಅಭಿವೃದ್ಧಿ ಹೊಂದುತ್ತಿದೆ. 2 ದಶ ಲಕ್ಷ ಟನ್ನಿಗೂ ಹೆಚ್ಚಿನ ಸಾಮರ್ಥ್ಯದ ಬೃಹತ್ ಸಿಮೆಂಟ್ ಸ್ಥಾವರರಗಳ ಸ್ಥಾಪನೆಗೆ ಸಂಬಂಧಿಸಿದಂತೆ ಪ್ರಸ್ತಾವಗಳನ್ನು ಸ್ವೀಕರಿಸಲಾಗಿದೆ ಮತ್ತು ಆ ಕುರಿತು ಎಲ್ಲ ಅನುಮೋದನೆ ನೀಡಲಾಗಿದೆ. ಈ ಹೊಸ ಸಿಮೆಂಟ್ ಸ್ಥಾವರಗಳ ಕಾರ್ಯಾರಂಭದೊಂದಿಗೆ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಅತಿ ಹೆಚ್ಚು ಸಿಮೆಂಟ್ ಉತ್ಪಾದಿಸುವ ರಾಜ್ಯವಾಗುವುದೆಂದು ನಿರೀಕ್ಷಿಸಲಾಗಿದೆ.

55. ನನ್ನ ಸರ್ಕಾರವು, ಸ್ಥಿರವಾದ ಕೈಗಾರಿಕಾ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಮೂಲಭೂತ ಸೌಲಭ್ಯಗಳನ್ನು ಬಲಪಡಿಸುವ ಅಗತ್ಯತೆಯನ್ನು ಮನಗಂಡಿದೆ. ಖಾಸಗಿ ವಲಯದಲ್ಲಿ ಲಭ್ಯವಿರುವ ಆರ್ಥಿಕ ಸಂಪನ್ಮೂಲಗಳು ಮತ್ತು ವ್ಯವಸ್ಥಾಪನೆ ಹಾಗೂ ತಾಂತ್ರಿಕ ಪ್ರತಿಭೆಗಳನ್ನು ಪೂರ್ಣವಾಗಿ ಬಳಸಿಕೊಳ್ಳಲಾಗುವುದು. ವಿಮಾನದ ನಿಲ್ದಾಣಗಳು, ಸಣ್ಣ ಬಂದರುಗಳು, ಎಕ್ಸ್‌ಪ್ರೆಸ್/ರಾಜ್ಯ ಹೆದ್ದಾರಿಗಳು ಪ್ರವಾಸೋದ್ಯಮ ಮತ್ತು ನಗರದ ಮೂಲ ಸೌಲಭ್ಯಗಳು ಈ ಕ್ಷೇತ್ರಗಳನ್ನು ಖಾಸಗಿ ವಲಯದ ಬಂಡವಾಳ ಹೂಡಿಕೆಗಾಗಿ ಈಗಾಗಲೇ ಗುರುತಿಸಲಾಗಿದೆ.

56. ದೇವನಹಳ್ಳಿಯಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆಗಾಗಿ ಮಂಜೂರಾತಿ ನಿರೀಕ್ಷಿಸಲಾಗಿದೆ. ಹಾಸನದಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗಾಗಿ ಬೇಕಾಗುವ ಭೂಮಿಯನ್ನು ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ದೊರಕಿಸಿಕೊಡಲಾಗಿದೆ. ಭಾರತ ವಿಮಾನ ನಿಲ್ದಾಣ ಪ್ರಾಧಿಕಾರದ ಅಥವಾ ಖಾಸಗಿವಲಯದ ಪಾಲ್ಗೊಳ್ಳುವಿಕೆಯೊಂದಿಗೆ ಹುಬ್ಬಳ್ಳಿ, ಗುಲ್ಬರ್ಗಾ, ಮೈಸೂರು ಮತ್ತು ಬೆಳಗಾಂ ಈ ನಗರಗಳಲ್ಲಿ ಈಗಿರುವ ವಿಮಾನ ನಿಲ್ದಾಣ, ವಿಮಾನ ಇಳಿದಾಣಗಳನ್ನು ಮೇಲ್ದರ್ಜೆಗೇರಿಸುವ ಮತ್ತು ಬಿಜಾಪುರ ಹಾಗೂ ಶಿವಮೊಗ್ಗ ನಗರಗಳಲ್ಲಿ ಹೊಸ ವಿಮಾನ ನಿಲ್ದಾಣಗಳನ್ನು ನಿರ್ಮಿಸುವ ವಿಷಯ ತೀವ್ರ ಪರಿಶೀಲನೆಯಲ್ಲಿದೆ.

57. ಸಣ್ಣ ಪ್ರಮಾಣದ ಕೈಗಾರಿಕೆಗಳೂ ಸಹ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸುವುದು ಅಗತ್ಯವಾಗಿದೆ ಮತ್ತು ಈ ಉದ್ದೇಶಕ್ಕಾಗಿ, ತಂತ್ರಜ್ಞಾನವನ್ನು ಕೂಡಲೇ ಮೇಲ್ದರ್ಜೆಗೇರಿಸುವ, ವೃತ್ತಿಪರ ವ್ಯವಸ್ಥಾಪನೆಯನ್ನು ಅಳವಡಿಸುವ ಮತ್ತು ಅತ್ಯಂತ ಹೆಚ್ಚಿನ ಗುಣಮಟ್ಟದ ಖಾತರಿ ನೀಡುವ ಅವಶ್ಯಕತೆಯಿದೆ. ಈ ದಿಸೆಯಲ್ಲಿ ಮೊದಲನೇ ಕ್ರಮವಾಗಿ, ನನ್ನ ಸರ್ಕಾರವು, ವಿಶ್ವ ಕೈಗಾರಿಕಾ ಅಭಿವೃದ್ಧಿ ಸಂಸ್ಥೆಯ ಸಹಯೋಗದೊಂದಿಗೆ ಇಂಟೆಕ್ ಮಾರ್ಕ್‌ನ್ನು ವ್ಯವಸ್ಥೆಗೊಳಿಸುತ್ತಿದೆ. ಇದರಿಂದಾಗಿ ರಾಜ್ಯದ ಸಣ್ಣ ಪ್ರಮಾಣದ ಕೈಗಾರಿಕೆಗಳು ತಾಂತ್ರಿಕತೆಯಲ್ಲಿ ಉನ್ನತಿ ಸಾಧಿಸಿರುವ ವಿಶ್ವದ ಎಲ್ಲೆಡೆಯ ಕೈಗಾರಿಕೆಗಳೊಂದಿಗೆ ನೇರ ಸಂಪರ್ಕ ಹೊಂದುವಂತಾಗುತ್ತದೆ.

58. 3000 ಹೆಕ್ಟೇರು ಹೆಚ್ಚುವರಿ ಪ್ರದೇಶವನ್ನು ರೇಷ್ಮೆ ಸಾಗುವಳಿ ಅಡಿಯಲ್ಲಿ ತರುವ ನಿರೀಕ್ಷೆಯಿದೆ. ಇದರಿಂದ ಸುಮಾರು 39,000 ಜನಕ್ಕೆ ಉದ್ಯೋಗಾವಕಾಶ ದೊರೆಯುತ್ತಿದೆ. ಅಸಂಪ್ರದಾಯಕ ಪ್ರದೇಶಗಳಲ್ಲಿ ರೇಷ್ಮೆ ರೀಲಿಂಗ್‌ಗೆ ಒತ್ತು ನೀಡಲಾಗುವುದು. ಕಚ್ಚಾ ರೇಷ್ಮೆಯ ಗುಣಮಟ್ಟವನ್ನು ಸುಧಾರಿಸುವುದಕ್ಕೆ ಮತ್ತು ರೇಷ್ಮೆ ರೀಲಿಂಗ್ ಕಾರ್ಯ ಚಟುವಟಿಕೆಗೆ ಹೆಚ್ಚಿನ ಬೆಂಬಲ ನೀಡುವುದಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಲಾಗುವುದು. ರಾಜ್ಯದ ಏಳು ನಗರಗಳಾದ ಜೇವರ್ಗಿ, ಬಿಜಾಪುರ, ಗೋಕಾಕ್, ಮಧುಗಿರಿ, ಕೂಡ್ಲಿಗಿ, ಚಿತ್ರದುರ್ಗ ಮತ್ತು ಹಾಸನದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.

59. ಅಂತರ ರಾಷ್ಟ್ರೀಯ ವ್ಯಾಪಾರ ಮೇಳಗಳು, ವಸ್ತು ಪ್ರದರ್ಶನಗಳು, ಸಮ್ಮೇಳನಗಳು ಮತ್ತು ಸಮಾವೇಶಗಳನ್ನು ನಡೆಸುವುದಕ್ಕೆ ಸಂಬಂಧಿಸಿದ ಸೌಲಭ್ಯಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಆದ್ದರಿಂದ ನನ್ನ ಸರ್ಕಾರವು ವೈಟ್‌ಫೀಲ್ಡ್‌ನಲ್ಲಿ ಸುಮಾರು 50 ಎಕರೆ ಜಮೀನಿನಲ್ಲಿ ಖಾಯಂ ವಸ್ತು ಪ್ರದರ್ಶನ ಹಾಗೂ ಸಮಾವೇಶ ಸಂಕೀರ್ಣವೊಂದನ್ನು ಸ್ಥಾಪಿಸಲು ಕ್ರಮ ಕೈಗೊಂಡಿದೆ. ಸದ್ಯದಲ್ಲೇ ಬೆಂಗಳೂರು ನಗರವು ವಿಶ್ವದಲ್ಲಿಯೇ ಅತ್ಯಂತ ಪ್ರಮುಖ ಸಮಾವೇಶ ನಗರವಾಗಲಿದೆಯೆಂಬ ವಿಶ್ವಾಸ ನನಗಿದೆ.

60. ನನ್ನ ಸರ್ಕಾರವು, ಆಡಳಿತವನ್ನು ಹೆಚ್ಚು ಸ್ಪಂದನಶೀಲವನ್ನಾಗಿ ಹಾಗೂ ದಕ್ಷವಾಗಿ ಮಾಡಲು ಬದ್ಧವಾಗಿದೆ. ಜಿಲ್ಲಾ ಮಟ್ಟದ ಆಡಳಿತವು ಗ್ರಾಮೀಣ ಜನರ ದೃಷ್ಟಿಯಿಂದ ನಿರ್ಣಾಯಕವಾಗಿದೆ. ಸರ್ಕಾರವನ್ನು ಜನತೆಯ ಹತ್ತಿರಕ್ಕೆ ತರಲು ಮತ್ತು ಸ್ಪಂದನಶೀಲವಾಗಿ

ಮಾಡಲು, ನನ್ನ ಸರ್ಕಾರವು ದೊಡ್ಡ ಜಿಲ್ಲೆಗಳನ್ನು ವಿಭಜಿಸಿ ಹೊಸ ಜಿಲ್ಲೆಗಳನ್ನು ರಚಿಸಲು ಉದ್ದೇಶಿಸಿದೆ. ಆಡಳಿತ ವೆಚ್ಚದಲ್ಲಿ ಆರ್ಥಿಕ ಮಿತವ್ಯಯವನ್ನು ಸಾಧಿಸುವ ಅವಶ್ಯಕತೆಯನ್ನು ಕೂಡ ಗಮನದಲ್ಲಿರಿಸಿಕೊಳ್ಳಬೇಕಾಗಿದೆ. ಅಂತಿಮ ನಿರ್ಧಾರವನ್ನು ಕೈಗೊಳ್ಳುವುದಕ್ಕೂ ಮೊದಲು ಸದನದ ಎಲ್ಲ ವರ್ಗದವರೊಂದಿಗೆ ಈ ಬಗ್ಗೆ ವ್ಯಾಪಕವಾದ ಚರ್ಚೆ ನಡೆಸಲು ನನ್ನ ಸರ್ಕಾರ ಉದ್ದೇಶಿಸಿದೆ.

61. ನನ್ನ ಸರ್ಕಾರವು ರಾಜ್ಯದಲ್ಲಿ ಕನ್ನಡ ಭಾಷೆಗೆ ಪರಮೋಚ್ಚ ಸ್ಥಾನವನ್ನು ನೀಡುವುದಕ್ಕೆ ಬದ್ಧವಾಗಿದೆ. ಆಡಳಿತವು ಎಲ್ಲಾ ಹಂತಗಳಲ್ಲೂ ಜನರ ಭಾಷೆಯಲ್ಲಿಯೇ ನಡೆದಾಗ ಮಾತ್ರ ಅದು ಸ್ಪಂದನಶೀಲವಾಗುತ್ತದೆ. ನನ್ನ ಸರ್ಕಾರವು ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತಹಶೀಲ್ದಾರರ ಅಧ್ಯಕ್ಷತೆಯಲ್ಲಿ, ತಾಲ್ಲೂಕು ಮಟ್ಟದಲ್ಲಿ ಕನ್ನಡ ಜಾಗೃತಿ ಸಮಿತಿಗಳನ್ನು ರಚಿಸಲು ಉದ್ದೇಶಿಸಿದೆ. ಇದೇ ರೀತಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಕನ್ನಡ ಜಾಗೃತಿ ಸಮಿತಿಗಳನ್ನು ರಚಿಸಲು ಉದ್ದೇಶಿಸಿದೆ. ಈ ಸಮಿತಿಗಳು ಸರ್ಕಾರದ ಭಾಷಾ ನೀತಿಯ ಅನುಷ್ಠಾನದಲ್ಲಿ ಜನರೂ ಪಾಲ್ಗೊಳ್ಳುವಂತೆ ನೋಡಿಕೊಳ್ಳುತ್ತವೆ.

62. ಶಾಸಕರು ತಮ್ಮ ಕ್ಷೇತ್ರಗಳ ಜನತೆಗೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಅನುಕೂಲ ಕಲ್ಪಿಸುವುದಕ್ಕಾಗಿ ನನ್ನ ಸರ್ಕಾರವು ಇತ್ತೀಚೆಗೆ ಆಪ್ತ ಸಹಾಯಕರ ನೆರವು ಮತ್ತು ಕಛೇರಿ ಸ್ಥಳಾವಕಾಶಗಳಂಥ ಕೆಲವು ಸೌಲಭ್ಯಗಳನ್ನು ಮಂಜೂರು ಮಾಡಿದೆ.

63. ಬಹಳ ಕಾಲದಿಂದ ಇತ್ಯರ್ಥವಾಗಬೇಕಾಗಿದ್ದ ರಾಜ್ಯದ ಕೆಲವು ಅಗತ್ಯತೆಗಳನ್ನು ಈಡೇರಿಸಿದ್ದಕ್ಕಾಗಿ ನನ್ನ ಸರ್ಕಾರವು ಕರ್ನಾಟಕ ಜನತೆಗೆ ಪರವಾಗಿ ಭಾರತ ಸರ್ಕಾರಕ್ಕೆ ತನ್ನ ಕೃತಜ್ಞತೆ ಹಾಗೂ ಧನ್ಯವಾದಗಳನ್ನು ವ್ಯಕ್ತಪಡಿಸಲು ಇಚ್ಛಿಸುತ್ತದೆ. ಇವುಗಳಲ್ಲಿ ವಿದ್ಯುತ್ ಯೋಜನೆಗಳು, ರಾಜ್ಯಕ್ಕೆ ಒಂದು ಪ್ರತ್ಯೇಕ ರೈಲ್ವೆ ವಲಯ, ಹೊಸ ರೈಲ್ವೆ ಮಾರ್ಗಗಳು, ಗೇಜ್ ಪರಿವರ್ತನೆ, ಹುಬ್ಬಳ್ಳಿಯ ರೈಲ್ವೆ ಕಾರ್ಯಾಗಾರವನ್ನು ಬಲಪಡಿಸುವುದು, ಸಕ್ಕರೆ ಕಾರ್ಖಾನೆಗಳಿಗೆ ಲೈಸೆನ್ಸ್ ನೀಡುವುದು ಮತ್ತು ನೀರಾವರಿ ಅಭಿವೃದ್ಧಿಯನ್ನು ತ್ವರಿತಗೊಳಿಸಲು ಹಣ ಒದಗಿಸುವುದು ಸೇರಿದೆ. ಕೇಂದ್ರ ಸರ್ಕಾರವು ರಾಜ್ಯಕ್ಕೆ ಜರೂರಾಗಿ ಬೇಕಾದ ಮೂಲಭೂತ ಸೌಕರ್ಯಗಳ ಯೋಜನೆಗಳಿಗೆ ನೆರವು ನೀಡುವುದನ್ನು ಮುಂದುವರಿಸುತ್ತದೆಂಬುದರಲ್ಲಿ ನಮಗೆ ಯಾವುದೇ ಸಂಶಯವಿಲ್ಲ.

64. ನನ್ನ ಭಾಷಣವನ್ನು ಶಾಂತಚಿತ್ತದಿಂದ ಆಲಿಸಿದ ಸನ್ಮಾನ್ಯ ಸಭಾಪತಿಯವರಿಗೆ, ಸನ್ಮಾನ್ಯ ಅಧ್ಯಕ್ಷರಿಗೆ ಮತ್ತು ಉಭಯ ಸದನಗಳ ಸನ್ಮಾನ್ಯ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ ನನ್ನ ಭಾಷಣವನ್ನು ಮುಗಿಸುತ್ತಿದ್ದೇನೆ. ನಮ್ಮ ವಿಧಾನ ಮಂಡಲದ ಚರ್ಚೆಗಳು ಕರ್ನಾಟಕದ ಜನರಿಗೆ ಫಲಪ್ರದವೂ, ಪ್ರಯೋಜನಕಾರಿಯೂ ಆಗುವುದರ ಬಗ್ಗೆ ನನಗೆ ಸಂಪೂರ್ಣ ವಿಶ್ವಾಸವಿದೆ.

ಜೈ ಕರ್ನಾಟಕ, ಜೈ ಹಿಂದ್

(ರಾಜ್ಯಪಾಲರ ಭಾಷಣವು 12.45 ಗಂಟೆಗೆ ಮುಕ್ತಾಯವಾಯಿತು.)

(ಸದನವು ಪುನಃ ಮಧ್ಯಾಹ್ನ 12-50ಕ್ಕೆ ಸಮಾವೇಶಗೊಂಡಿತು)